ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೫, ಅಕ್ಟೋಬರ್ ೨೦೧೭

ಕನ್ನಡವೆಲ್ಲಿ ಬೆಳಗುವುದೋ ಬೆಳಕು ಅಲ್ಲಿಯೆ ಮೂಡುವುದು ...

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೨

ಸಿಡ್ನಿ ವರದಿ ... ಪು. ೩

ಚಿಲುಮೆಯ ಒಳಗೆ

ಬಿ.ಜಿ.ಎಲ್ ಸ್ವಾಮಿ ... ಪು. ೬

ಮಂಕುತಿಮ್ಮನ ಕಗ್ಗ ... ಪು. ೧೦

ಚಿಲುಮೆಯ ಒಳಗೆ

ರಾಂ ರಾಮ ... ಪು. ೧೧

ಕಥಾಚಿಲುಮೆ, ರೆಸಿಪಿ, ಕಾವ್ಯ ... ಪು. ೧೩/೧೪

ಚಿಲುಮೆಯ ಒಳಗೆ

ಪದಪುಂಜ ... ಪು. ೧೫

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೮

ಬಿ.ಜಿ. ಎಲ್ ಸ್ವಾಮಿ

ಪು. ೬



ನಾವು ದೀಪಗಳನ್ನು ಹಚ್ಚುವುದು ನಾವಿರುವ ಪರಿಸರದಲ್ಲಿ ಬೆಳಕು ಮೂಡಲೆಂದು. ಅತಿ ಸರಳವಾದ ಮಣ್ಣಿನ ಹಣತೆಯಲ್ಲೂ ಹಚ್ಚಬಹುದು. ಅಥವಾ ನಮ್ಮ ನಮ್ಮ ಅಭಿರುಚಿ, ಇಚ್ಛೆ ಮತ್ತು ಸಾಮರ್ಥ್ಯದಂತೆ ವಿವಿಧ ಆಕಾರಗಳ, ಬೆಲೆಬಾಳುವ ಮನಮೋಹಕ ದೀಪಸ್ಥಂಭಗಳಲ್ಲೂ ಹಚ್ಚಬಹುದು. ಅಥವಾ ವಿದ್ಯುಚ್ಛಕ್ತಿ ದೀಪಗಳಲಂಕಾರವನ್ನೂ ಮಾಡಬಹುದು. ಎಷ್ಟೇ ದುಬಾರಿ ದೀಪಗಳ ವ್ಯವಸ್ಥೆ ಮಾಡಿಯೂ, ನಮಗೆ ಬೇಕಾಗುವಂತಹ ಬೆಳಕನ್ನು ಅದು ಕೊಡದಿದ್ದರೆ ಅದು ವ್ಯರ್ಥ್ಯವೇ ಸರಿ. ಅದೇ ರೀತಿ ಅತಿ ಸರಳತೆಯನ್ನು ಪ್ರದರ್ಶನಕ್ಕಾಗಿ ವ್ಯಕ್ತಪಡಿಸುವೆನೆಂದು, ಸೀಳಿರುವ ಹಣತೆಯೋ, ಅಥವಾ ಸೂಕ್ತವಿರದ ಬತ್ತಿ ಅಥವಾ ತೈಲವನ್ನು ಉಪಯೋಗಿಸಿದರೆ, ಅಲ್ಲಿಯೂ ಸರಿಯಾದ ಬೆಳಕು ಸಿಗದೇ ಹೋಗಬಹುದು.

ಸಂಘಜೀವಿಯಾದ ಮಾನವನು, ತಾನು ಮಾಡುತ್ತಿರುವ ಕೆಲಸವನ್ನು ಇತರರು ಗುರುತಿಸಲಿ ಎಂದು ಅಪೇಕ್ಷಿಸುವುದು ಸಹಜ. ಆದರೆ ಆ ಗುರುತಿಸುವಿಕೆಗೆ ಮಾತ್ರವೇ ಕೆಲಸವನ್ನು ಮಾಡಲು ಹೊರಟರೆ, ಈ ಮುಂಚೆ ಸೂಚಿಸಿದಂತೆ, ಆ ಕಾಯಕವು ಸೂಕ್ತವಲ್ಲದ ದೀಪದಂತಾಗುತ್ತದೆ. ಅಂತಹ ಕೆಲಸದಿಂದ ಸಮಾಜಕ್ಕೆ ಬೆಳಕು ಕೊಡುವ ಬದಲು ಅಲ್ಲಿ ಕೇವಲ ಆಡಂಬರದ ಮಬ್ಬು ಎದ್ದು ತೋರುತ್ತದೆ.

ಈ ವಿಷಯದಲ್ಲಿ ಭಾಷೆಯೂ ಹೊರತಲ್ಲ. ಭಾಷೆಯು ಮನುಷ್ಯರ ನಡುವೆ ಸಂವಹನಕ್ಕಾಗಿ ಇರುವುದು ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ಈ ಭಾಷೆಯೆಂಬ ದೀಪದಿಂದ ನಮ್ಮ ನಮ್ಮ ಬದುಕಿನಲ್ಲಿ ಅದೆಂತಹ ಅಮೋಘ ಬೆಳಕನ್ನು ನಾವೇ ಪಡೆದುಕೊಳ್ಳಬಹುದು ಎನ್ನುವುದನ್ನು ಅಷ್ಟಾಗಿ ಎಲ್ಲರೂ ತಿಳಿದುಕೊಂಡಿರುವುದಿಲ್ಲ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಕನ್ನಡವನ್ನು ಕಲಿತ ನಮ್ಮ ತಲೆಮಾರು, ಕನ್ನಡವೆಂಬ ದೀಪಕ್ಕೆ ಸೂಕ್ತವಾದ ಬತ್ತಿ, ಸೊಡಿಲು, ತೈಲಗಳನ್ನು ಪೂರೈಸದೆ, (ನಾವೇ ಭಾಷೆಯನ್ನು ಉಪಯೋಗಿಸುವುದನ್ನು ಬಿಟ್ಟು ಬಿಡುತ್ತಾ) ಆ ಕನ್ನಡ ದೀಪವು ಮುಂದಿನ ತಲೆಮಾರಿನ ಹೊತ್ತಿಗೆ ಆರಿಯೇ ಹೋಗಬಹುದೇನೋ ಎನ್ನುವ ಪರಿಸ್ಥಿತಿಗೆ ತಂದಿಟ್ಟಿದ್ದೀವಿ ಎಂದರೆ ಅತಿಶಯೋಕ್ತಿ ಆಗಲಾರದು. ಇಲ್ಲಿ ಯಾರನ್ನೂ ದೂಷಿಸಿ ಪ್ರಯೋಜನವಿಲ್ಲ. ಆದರೆ ನಂದಿಹೋಗುತ್ತಿರುವ ಕನ್ನಡ ದೀವಿಗೆಗೆ ಸೂಕ್ತವಾದ ಕಾಯಕಲ್ಪವನ್ನು ನಾವೇ ಮಾಡಬೇಕು. ಅದು ಎಷ್ಟೇ ಸಣ್ಣ ಪ್ರಮಾಣದಲ್ಲಾದರೂ ಸರಿ, ನಾವುಗಳು ಕೂಡಲೇ ಕಾರ್ಯಪ್ರವೃತ್ತರಾಗಬೇಕು. ಇಲ್ಲಿ ನಮ್ಮಗಳ, ನಾವು ಗುರುತಿಸಿಕೊಂಡಿರುವ ಸಂಘಸಂಸ್ಥೆಗಳ ಸ್ವಹಿತಾಸಕ್ತಿಯು ಮುಖ್ಯವಾಗದೆ, ನಮ್ಮ ಪ್ರೀತಿಯ ಕನ್ನಡ ದೀಪ್ತಿಯನ್ನು ಬೆಳಗಿಸಲಷ್ಟೇ ಪ್ರಾಮುಖ್ಯತೆಯನ್ನು ಕೊಡಬೇಕು. ಹಾಗೆ ಮಾಡಿದಾಗ ಬೆಳಗುವ ಕನ್ನಡದ ಬೆಳಕು ನಿತ್ಯ ದೀಪಾವಳಿಯನ್ನು ತರುವುದರಲ್ಲಿ ಸಂದೇಹವೇ ಇಲ್ಲ.▪

ಎರಡು ತಿಂಗಳ ಪ್ರಮುಖ ದಿನಗಳು

ಅಕ್ಟೋಬರ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ/ಕಾರ್ತೀಕ ಮಾಸ

01ಭಾ - ಏಕಾದಶಿ
02 ಸೋ - ಗಾಂಧೀಜಿ ಜನ್ಮ ದಿನ
05 ಗು - ಹುಣ್ಣಿಮೆ
08 ಭಾ - ಸಂಕಷ್ಟ ಚತುರ್ಥಿ
15 ಭಾ - ಏಕಾದಶಿ
18 ಬು - ನರಕ ಚತುರ್ದಶಿ
19 ಗು - ದೀಪಾವಳಿ ಅಮಾವಾಸ್ಯೆ
20 ಶು - ಬಲಿಪಾಡ್ಯಮಿ/ ಕಾರ್ತೀಕ ಮಾಸ ಆರಂಭ
31 ಮಂ - ಏಕಾದಶಿ

ನವೆಂಬರ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ/ ಮಾರ್ಗಶಿರ ಮಾಸ

01 ಬು - ಕನ್ನಡ ರಾಜ್ಯೋತ್ಸವ/ತುಳಸಿ ವಿವಾಹ
03/04 - ಹುಣ್ಣಿಮೆ
04 ಶ - ಗುರುನಾನಕ್ ಜಯಂತಿ
06 ಸೋ - ಕನಕದಾಸ ಜಯಂತಿ
07 ಮಂ - ಸಂಕಷ್ಟ ಚತುರ್ಥಿ
14 ಮಂ - ಮಕ್ಕಳ ದಿನಾಚರಣೆ/ಏಕಾದಶಿ
17/18 ಅಮಾವಾಸ್ಯೆ
19 ಭಾ - ಮಾರ್ಗಶಿರ ಮಾಸ ಆರಂಭ
29 ಬು - ಮೋಕ್ಷದಾ ಏಕಾದಶಿ

ಶ್ರೀ ಗಣೇಶ್ ದೇಸಾಯಿ ಹಾಗು ಶ್ರೀ ಪ್ರಕಾಶ್ ಹೆಗ್ಡೆ ಇವರುಗಳ ಜೊತೆ ಸಿಡ್ನಿಯ ತಬಲಾ ವಾದಕರಾದ ಶ್ರೀ ಅಭಿಜಿತ್ ದಾನ್ – ನಡೆಸಿಕೊಟ್ಟ "ನಾದ ಸುರಭಿ" ಕಾರ್ಯಕ್ರಮ ಯಶಸ್ಸು ಕಂಡ ಪರಿ ಹೀಗೆ.

ಹಿಲ್ಡಾ ಎಂ. ಡೇವಿಸ್ ಸಿಟಿಜನ್ ಸೆಂಟರ್ ನಲ್ಲಿ ಸಿಡ್ನಿ ಕನ್ನಡ ಶಾಲೆಯ ಫಂಡ್ ರೈಸೆರ್ ಗಾಗಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಸರಿಯಾಗಿ ೬ ಘಂಟೆಗೆ ವೇದಿಕೆ ಮೇಲೆ ಎಲ್ಲಾ ಕಲಾವಿದರು ಉಪಸ್ಥಿತರಿದ್ದು, ಶ್ರೀ ಗಣೇಶ್ ದೇಸಾಯಿ ಅವರ ಕೈಯಿಂದ ದೀಪ ಬೆಳಗುವುದರ ಮೂಲಕ ಶುರುವಾಯಿತು.ಇವರು ಪ್ರಾರ್ಥನೆಯಿಂದ ಶುರು ಮಾಡಿ, ದಸರಾ ಹಬ್ಬದ ಶುಭಾಶಯಗಳನ್ನು ಕೋರುತ್ತ ಎಲ್ಲಾ ಸಿಡ್ನಿ ನಿವಾಸಿಗಳನ್ನು ಕಾರ್ಯಕ್ರಮಕ್ಕೆ ಬರ ಮಾಡಿಕೊಂಡರು.

ಮೊದಲ ಕಂತು

"ಕಾವೇರಿ ಇಂದ ಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್" – ಎಂದು ಶ್ರೀ ವಿಜಯ, ನೃಪತುಂಗ ರಾಜನಿಗೆ ಅರ್ಪಿಸಿದ ಹಳೆಗನ್ನಡದ ಕವಿತೆಯ ಕಂಪು ಇಲ್ಲಿ ತೇಲಿಸಿದರು. ಅಭಿಮಾನಿಗಳು, ಗುಣಿಗಳು, ಸುಪ್ರಭುಗಳು, ಗಂಭೀರ ಚಿತ್ತ, ವಿವೇಕ ಉಳ್ಳವರು, ಚೆಲ್ವರು ಎಂದು ಇದರ ಅರ್ಥದ ವಿವರವನ್ನು ಕೊಟ್ಟರು. ಕನ್ನಡ ನಾಡಿನ ವಿಸ್ತಾರ ಹಾಗು ಅದರ ಜನರ ವೈವಿಧ್ಯತೆ ಮೆರೆದ ಸಾಲುಗಳು ಇವು. ಗಣೇಶ್ ರವರ ಕಂಠದಲ್ಲಿ ಸುಶ್ರಾವ್ಯವಾಗಿ ಬಂದಿತು.

ಇನ್ನು ಭಕ್ತಿ(ಗೀತೆ)ಯಿಂದ ಶುರು ಮಾಡಿ ಭಕ್ತಿಯಿಂದ ಮುಗಿಸಬೇಕೆಂದು ಅವರ ಗುರುಗಳು ಶ್ರೀ ವಸಂತ ಕನಕಪುರ ಹಾಕಿಕೊಟ್ಟ ಕ್ರಮದಂತೆ – ಜಗನ್ನಾಥ ದಾಸರ "ನೀಲ ಲೋಹಿತ..." ಪದವು ಮನೋಭಿಮಾನಿ ದೇವರಾದ ಶಿವನ ಧ್ಯಾನದಿಂದ "ಯೋಗದಿ ಭಜಿಸುವ ಭಾಗವತರೊಳಿಡು" ಎನ್ನುವಲ್ಲಿಗೆ, ಆಗಲೇ ಜನರು ಇವರ ಗಂಟಲ ಸಿರಿಗೆ ಮನಸೋತು ಇವರೊಡನೆ ತಾಳ ಹಾಕಲು ಆರಂಭಿಸಿದ್ದರು

ಪುರಂದರ ದಾಸರ "ಹರಿ ಕುಣಿದ" – ಪ್ರಕಾಶ್ ಅವರ ಕೊಳಲಿನ ನಾದಕ್ಕೂ, ಗಣೇಶ ಅವರು ಸಾಹಿತ್ಯದಲ್ಲಿ ಬರುವ ಶಬ್ದಗಳನ್ನು ತಬಲ ಬೋಲ್ ಗಳಿಗೆ ಅನ್ವಯಿಸಿ - "ದಿಟ್ಟ ಮಲ್ಲರ ಗಂಡ" ಸಾಲು ಹಾಡಿದ್ದು ಅವರ ಹಾಡುಗಾರಿಕೆಯಲ್ಲಿ, ಸಂಯೋಜನೆಯಲ್ಲಿ ಇರುವ ಕ್ರಿಯಾಶೀಲತೆ ಹೊರಗೆ ಬಂದಿತು. "ದಿಟ್ಟ" ಅಂದ ಕೂಡಲೇ ಅಭಿಜಿತ್ ಇಂದ ತಬಲದಲ್ಲಿ "ಧಿ" "ಟ" ಬರುತ್ತಿತ್ತು. ಆಡುವ ಭಾಷೆ ಬೇರೆ ಆದರೂ ಸಂಗೀತ ಹೇಗೆ ಅದೆಲ್ಲವನ್ನು ಸೇರಿಸುತ್ತದೆ ಅನ್ನುವುದಕ್ಕೆ ಇದೆ ಸಾಕ್ಷಿ.

ಇದರ ರುಚಿ ಮೆಲ್ಲುತ್ತಿರುವಂತೆಯೇ ಕರ್ನಾಟಕ ಹಾಗು ಹಿಂದುಸ್ತಾನಿ ಶೈಲಿಯ ಮಿಶ್ರ ಸಂಯೋಜನೆಯಲ್ಲಿ "ಪೋಗದಿರೆಲೋ ರಂಗ" ಹಾಗು "ಕೃಷ್ಣ ನೀ ಬೇಗನೆ ಬಾರೋ", ಶಂಕರಾಭರಣ ಹಾಗು ಯಮನ್ ರಾಗದಲ್ಲಿ – ಅಲ್ಲಿ ಬಾಗಿಲಿಂದಾಚೆಗೆ ಹೋಗಬೇಡ ಅನ್ನುತ್ತ ಇಲ್ಲಿ "ಬೇಗನೆ ಬಾರೋ, ಮುಖವನ್ನೇ ತೋರೋ" !!. ಈ ವಿಧದ ಪ್ರಯೋಗ ಸಂಯೋಜನೆಯಲ್ಲಿ ಕಂಡಿದ್ದು ಅತಿ ವಿರಳ. ಗಣೇಶ್ ಅವರ ಸೃಜನಶೀಲತೆ ಈಗಾಗಲೇ ಜನರಿಗೆ ತಿಳಿದುಹೋಗಿತ್ತು. ಇವರು ಇನ್ನು "ಜೀನಿಯಸ್ ದೇಸಾಯಿ" ಅಂತ ಹೆಸರಿಟ್ಟುಕೊಳ್ಳೋದು ಸೂಕ್ತವೇನೋ?

ಗುರು ರಾಯರ ಮೇಲಿನ ಜಗನ್ನಾಥ ದಾಸರ "ಬಾರೋ ರಾಘವೇಂದ್ರ ಬಾರೋ" ಹಾಡು ಶ್ರೀ ವಾಸುದೇವ್ ಹಾಗು ಶ್ರೀಮತಿ ನಾಗವೇಣಿ ಅವರಿಗೆ ಸಮರ್ಪಿಸಿ ಹಾಡಿದರು.

ಎರಡನೇ ಕಂತು

ವಚನ ಸಾಹಿತ್ಯದ ಕಡೆಗೆ ನಡೆಯುತ್ತಾ....

ಬಸವಣ್ಣನವರ "ಲೋಕದ ಡೊಂಕ ನೀವೇಕೆ ತಿದ್ದುವಿರಿ", "ಕಾಗೆಯೊಂದಗಳ ಕಂಡರೆ", "ಕಲ್ಲು ನಾಗರ ಕಂಡರೆ", "ಗೀತವ ಹಾಡಿದರೇನು", "ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ" – ಇವೆಲ್ಲ ವಚನಗಳ ತಾತ್ಪರ್ಯ ಮನುಷ್ಯನ ಶೋಕಿ, ಬೂಟಾಟಿಕೆ (hypocrisy), ಸ್ವಾರ್ಥ, ಭಕ್ತಿಯ ಮುಖಗಳಿಗೆ ಕನ್ನಡಿ ಹಿಡಿಯುತ್ತವೆ, ಕಣ್ತೆರೆದು ಮನವರಿಕೆ ಮಾಡಿಕೊಳ್ಳುವುದು ಅವರವರ ಧರ್ಮ.

ಸರ್ವಜ್ಞನ ವಚನಗಳು – "ಸಾಲವನು ಕೊಂಬಾಗ" – ಬಹುಶ ಇವತ್ತಿನ ದಿನದಲ್ಲಿ ಮನೆ ಕಟ್ಟಿದವರು, ಕ್ರೆಡಿಟ್ ಕಾರ್ಡ್ ಉಳ್ಳವರಿಗೆ ಎಲ್ಲರಿಗೂ ಅನ್ವಯ ಆಗುತ್ತದೆ. "ಸೇಂದಿಯನು ಸೇವಿಪನು ಹಂದಿಯಂತಿರುತಿಹನು" – ಇವೆಲ್ಲವೂ ಸಾಮಾಜಿಕ ತತ್ವ ಮೌಲ್ಯಗಳ ಕುರಿತು ಹೇಳಿದ್ದು ಎಂದಿಗೂ ಪ್ರಸ್ತುತ.

ಅರಿಷಡ್ವರ್ಗಗಳನ್ನು ಜಯಿಸಿ ಸಾಧನೆಯ ಹಾದಿ ಹಿಡಿಯಿರೆಂಬ ತತ್ವಗಳು ಸೊಗಸಾಗಿ ಗಣೇಶರ ಆಯ್ಕೆಯಲ್ಲಿ ಕಂಡು ಬಂದಿದ್ದು ಸಾಹಿತ್ಯದಲ್ಲಿರುವ ತತ್ವ ಹಾಗು ಸಂಗೀತ ಎರಡನ್ನು ಮಿಶ್ರಣ ಮಾಡಿ, ಹಾಡಿ ಮತ್ತಷ್ಟು ಮೆಚ್ಚುಗೆಗೆ ಪಾತ್ರರಾದರು. ಪ್ರಕಾಶರ ಕೊಳಲು ಇಂಪು ಇದನ್ನು ಮತ್ತೊಂದು ಪರಾಕಾಷ್ಠೆಗೆ ಎತ್ತಿತ್ತು.

ಮುಂದಿನ ಪುಟ ನೋಡಿ ...

ಮಂಕು ತಿಮ್ಮನ ಕಗ್ಗ

ಅಧ್ಯಾತ್ಮಿಕ ದಾರಿಯಲ್ಲಿ ಡಿ.ವಿ.ಜಿ. ಅವರ ಕೊಡಿಗೆ ಅತ್ಯಂತ ಮನ ಮೆಚ್ಚುವಂತದ್ದು. ಗಣೇಶ್ ಅವರು ಕಗ್ಗಗಳನ್ನು ಹಾಡಿ ಅದರ ಅರ್ಥ ತಿಳಿಸಿ, ಸಾಮಾನ್ಯ ಜನರಿಗೆ ತಿಳಿಸುವ ಪ್ರಶಂಸಾರ್ಹಕ ಕೆಲಸ ಮಾಡುತಿದ್ದಾರೆ. ಕಗ್ಗ ಕಗ್ಗಂಟಾಗದೆ, ಕರದಂಟ್ ಆಯಿತು.

"ಅಕ್ಕಿಯೊಳಗನ್ನವನು ಮೊದಲಾರು ಕಂಡವರು" , "ದಿವಸದಿಂ ದಿವಸಕ್ಕೆ", "ಸ್ಮಿತವಿರಲಿ ವದನದಲ್ಲಿ", "ಇಳೆಯಿಂದ ಮೊಳಕೆ", "ಬದುಕು ಜಟಕಾ ಬಂಡಿ", "ಗೌರವಿಸು ಜೀವನವ". " ಒಮ್ಮೆ ಹೂದೋಟದಲ್ಲಿ", "ನಗುವುದು ಸಹಜದ ಧರ್ಮ" – ಎಂಟು ಕಗ್ಗ ಗಳನ್ನು ಅರ್ಥ ಸಹಿತ ಹೇಳಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಇನ್ನು ಸಂತ ಶಿಶುನಾಳ ಶರೀಫರ "ಕೋಡಗನ ಕೋಳಿ ನುಂಗಿತ್ತಾ" ಜನಪ್ರಿಯ ಹಾಡು ಚಪ್ಪಾಳೆ ಶುರುವಿನಿಂದನೇ ಗಿಟ್ಟಿಸಿತ್ತು.

ಮೂರನೇ ಕಂತು

ಹವ್ಯಕ ಜನಪದ ಹಾಡು "ಅಪ್ಪಯ್ಯ ಎಂಗೆ ಬೇಕು ಚಂದಕಿದ್ದವ" – ಇದರ ಟೀಸರ್ ವೀಡಿಯೊ ನೋಡಿದವರು ಇದಕ್ಕಾಗಿ ಕಾದು ಕುಳಿತಿದ್ದರು ಎಂದರೆ ಅತಿಶಯೋಕ್ತಿ ಆಗಲಾರದು. ಶುರು ಮಾಡಿದ್ದೇ ತಡ, ಎಲ್ಲರು ಶಿಳ್ಳೆ ಉದಿ ಕೈ ಸೇರಿಸಿ ಆಹ್ಲಾದಿಸಿದರು. ಪ್ರೇಕ್ಷಕರ ಮನಸ್ಸು ಅತಿವೇಗದಲ್ಲಿ ಅರ್ಥ ಮಾಡಿಕೊಳ್ಳಬಲ್ಲ ಗಣೇಶರಿಗೆ ಸಮಯಸ್ಫೂರ್ತಿಗೆ ಯಾವ ಕೊರತೆಯು ಇಲ್ಲ. "ಅಪ್ಪಯ್ಯ ಎಂಗೆ ಬೇಕು ಸಿಡ್ನಿಲಿದ್ದವ" ಎಂದು ಛಂದವೂ / ಚಂದವೂ ಹೊಂದುವಂತೆ ಹಾಡಿದರು.

ಇಂದಿನ ಹಾಗು ಹಿಂದಿನ ಶತಮಾನದ ಖ್ಯಾತ ಕವಿಗಳ ಕೃತಿಗಳಲ್ಲಿ ಪ್ರಸಿದ್ಧವಾದಂತಹ – " ಯೆಂಡ ಯೆಡ್ತಿ ಕನ್ನಡ್ ಪದಗೊಳ್" ಜಿ. ಪಿ. ರಾಜರತ್ನಂ ಅವರ ಕನ್ನಡ ಅಭಿಮಾನ ಎತ್ತಿ ಹಾಡುವ ಪದ, ಬಹಳ ಖುಷಿ ಕೊಟ್ಟಿತು. ಹಾಗೆಯೇ ಎಂ.ಅರ್. ಕಮಲ ಅವರ " ಅಮ್ಮ ಹಚ್ಚೆದೊಂದು ಹಣತೆ" – ತಾಯಿಯ ಪ್ರೀತಿ ವಾತ್ಸಲ್ಯಕ್ಕೆ – ಭಾವಪೂರ್ಣ ಅರ್ಪಣೆ, ಗಣೇಶರು ಹೃದಯಕ್ಕೆ ನಾಟುವಂತೆ ಹಾಡಿದರು. ಕೆಲವರ ಕಣ್ಣಲ್ಲಿ ನೀರು ತುಂಬಿದ್ದು ಸತ್ಯ.

ನಾಲ್ಕನೇ ಕಂತು

ಪ್ರಕಾಶ್ ಹೆಗ್ಡೆ ಅವರು ತಮ್ಮ ಕೊಳಲಿನ solo - ರಾಗ ಹಂಸಧ್ವನಿಯಲ್ಲಿ ಬಂದಿಶ್ ಅನ್ನು ಮಧ್ಯಲಯದಲ್ಲಿ ಶುರು ಮಾಡಿ, ನಂತರ ದೃತ್ ಹಾಗು ಅತಿ ದೃತ್ ನಲ್ಲಿ ನುಡಿಸಿದ್ದು ಅವರ ಕೈನಲ್ಲಿ ಇರುವ ಮ್ಯಾಜಿಕ್ ತೋರಿಸಿದರು. ಮತ್ತಷ್ಟು, ಮುಗಿಯದಷ್ಟು ತಾನ್ ಗಳು. ಪ್ರಕಾಶರು "ಸವಾಲ್" ಎಸೆದಾಗ – ಅದಕ್ಕೆ ತಕ್ಕಂತೆ ತಬಲದಲ್ಲಿ ಅಭಿಜಿತ್ ಅವರ "ಜವಾಬ್", ಮೀಂದ್, ಮುರ್ಕಿ, ಸಪಾಟ್ ಗಳು ಹೇರಳ ವಾಗಿದ್ದು, ಅವರಿಬ್ಬರ ನುಡಿಸುತ್ತಿದಾಗಿನ ಖುಷಿ ಅವರ ಮುಖದಲ್ಲಿ ಎದ್ದು ಕಾಣುತಿತ್ತು. ಸರಿ ಸಮಾನವಾಗಿ ಪ್ರೇಕ್ಷಕರು ಕೂಡ ಅತಿ ದೃತ್ ನಲ್ಲಿ ಚಪ್ಪಾಳೆ ಸೇರಿಸಿ ಹರ್ಷೋದ್ಗಾರ ಮಾಡಿದರು.

ವಂದನಾರ್ಪಣೆ ನಂತರ – ಕೆ. ಎಸ್. ನರಸಿಂಹ ಸ್ವಾಮಿ ಅವರ " ಆತ್ತಿತ್ತ ನೋಡದಿರು" – ಚಂದದ ಲಾಲಿ ಹಾಡು ಸುಮಧುರವಾಗಿ ಹಾಡಿದರು.

ಐದನೇ ಕಂತು

ವಿಶೇಷ ಇನ್ನು ಮುಗೀಲಿಲ್ಲ – "ಭಾಗ್ಯದ ಲಕ್ಷ್ಮಿ ಬಾರಮ್ಮ" ಹಾಡು ಭೀಮಸೇನ್ ಜೋಷಿ ಅವರ ಪ್ರಸಿದ್ಧಿಸಿದ ರಾಗ ಬಿಭಾಸ್ ನಲ್ಲಿ ಶುರು ಮಾಡಿ, ಮೂರನೇ ಚರಣಕ್ಕೆ ರಾಗ ಸೋಹಿಣಿ, ರಾಗ ಮಾಲ್ಕೊಂಸ್, ರಾಗ ದುರ್ಗಾ ಹಾಗು ಕಡೆಯದಾಗಿ ರಾಗ ಮಧ್ಯಮಾವತಿಯಲ್ಲಿ ಕರ್ನಾಟಕ ಶೈಲಿಯಲ್ಲಿ ಮುಗಿಸಿದರು. ಬೇರೆ ಬೇರೆ ಥಾಟ್ ಗಳಲ್ಲಿ ಬೇರೆ ಬೇರೆ ರಾಗಗಳಲ್ಲಿ ಆಲಾಪ್, ಪಲ್ಲವಿ, ಚರಣಗಳು ಹಾಡಿದ್ದು ಜನರು "ಶಾಕ್" ನಲ್ಲಿ ಇದ್ದರು ಅಂದರೆ ಅತಿಶಯೋಕ್ತಿ ಆಗಲಾರದು.

ಜಿ. ಎಸ್.ಶಿವರುದ್ರಪ್ಪನವರ "ಎದೆ ತುಂಬಿ ಹಾಡಿದೆನು" – ಗಣೇಶರ ಬಾಯಲ್ಲಿ ಅಕ್ಷರಶಃ ಸತ್ಯ. "ಎಲ್ಲಾ ಕೇಳಲಿ ಎಂದು ನಾನು ಹಾಡುವುದಿಲ್ಲ" ಅನ್ನುವ ಸಾಲು ಮಾತ್ರ ಬಹುಶ: ಸಿಡ್ನಿ ಅವರಿಗೆ ಅನ್ವಯ ಆಗಲಿಕ್ಕಿಲ್ಲ, ಎಷ್ಟು ಹಾಡಿದರೂ ಕೇಳುತ್ತೇವೆ ಅನ್ನುತ್ತಾರೆ !!!

ಕೊನೆ ಮಾತು

ಒಂದು ಸಂಜೆಯಲ್ಲಿ ಒಂದು ಕಾಲದ ಅಥವಾ ಒಂದು ಭಾಷೆಯ ಗಾತ್ರ ವಿಸ್ತೀರ್ಣ ತಿಳಿಯುವುದು ಕಷ್ಟಸಾಧ್ಯ. ಆದರೆ ಸೆಪ್ಟೆಂಬರ್ ೨೩ ಮಾತ್ರ ಮರೆಯಲಾಗದಂತ ದಿನ. ಕಂತು ಕಂತುಗಳ ಕಂತೆ ತೆಗೆದು ನಮಗೆ ಹಳೆಗನ್ನಡದಿಂದ ಇಂದಿನ ನವೀನ ಕಾಲದವರೆಗಿನ ಎಲ್ಲಾ ರೀತಿಯ ಸಾಹಿತ್ಯದ ಅಡುಗೆ ಉಣಿಸಿದ ಗಣೇಶರಿಗೆ ಹಾಗು ಪ್ರಕಾಶರಿಗೆ ಸಿಡ್ನಿಗರಿಂದ ಹೃತ್ಪೂರ್ವಕ ಧನ್ಯವಾದಗಳು. ಕನ್ನಡ ಭಾಷಾಭಿಮಾನದ ಕೊರತೆ ಅಂದು ಯಾರಲ್ಲಿಯಾದರೂ ಇದ್ದರೆ ಅದನ್ನು ಹೋಗಲಾಡಿಸಿದ ದಿನ ಅದು,

ಇನ್ನೆಷ್ಟೋ ಕಂತುಗಳು ಉಳಿದಿವೆ, ಮುಂದಿನ ದಿನಗಳಲ್ಲಿ ಅದನ್ನು ನಮ್ಮ ಮುಂದಿಡುವ ಅವಕಾಶ ಒದಗಿ ಬರಲಿ ಎಂದು ಹಾರೈಸೋಣ. ▪

ನಾದ ಸುರಭಿಯ ಛಾಯಾಚಿತ್ರಗಳು

ಹೀಗೆಂದು ಅಂದಿನ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಉಮಾಶಂಕರ್ ದೀಕ್ಷಿತ್ ಅವರಿಂದ ಕರೆಸಿಕೊಂಡವರು ಡಾ. ಬಿಜಿಎಲ್ ಸ್ವಾಮಿ. ತಂದೆಯಷ್ಟೇ ಮಗನೂ ಪ್ರಖ್ಯಾತನೋ, ಮಗನ ಖ್ಯಾತಿಯೂ ತಂದೆಯ ಖ್ಯಾತಿಗೆ ಸಮಸಮವಾಗಿ ನಿಂತಿತೋ ತಿಳಿಯದು. ಆದರೆ ತಂದೆ ಮಗ ಇಬ್ಬರೂ ಕನ್ನಡ ಸಾಹಿತ್ಯ ರಂಗದ ಧೃವತಾರೆಗಳು ಎಂದರೆ ತಪ್ಪಾಗಲಾರದು.



ಡಾ. ಬಿ.ಜಿ.ಎಲ್.ಸ್ವಾಮಿಯವರು ಹುಟ್ಟಿದ್ದು 1918 ರಲ್ಲಿ. ತಂದೆಗೆ ಒಬ್ಬನೇ ಮಗ ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡರು. ತಾಯಿಯನ್ನು ನೋಡಿದ ನೆನಪೇ ಇಲ್ಲ. ಒಮ್ಮೆ ಲೇಖಕಿಯೊಬ್ಬರು ಪ್ರಸಿದ್ಧ ವ್ಯಕ್ತಿಗಳ ಪತ್ನಿಯರು ಎನ್ನುವ ಲೇಖನ ಮಾಲೆ ಬರೆಯತೊಡಗಿದಾಗ ಸ್ವಾಮಿಯವರಿಗೆ ಪತ್ರ ಬರೆದು ನಿಮ್ಮ ತಾಯಿಯವರ ಬಗೆಗೆ ಮಾಹಿತಿ ಕೇಳಿದ್ದಾಗ ಸ್ವಾಮಿಯವರು ನನಗೆ ಆಕೆ ಪರಿಚಯವಿಲ್ಲ, ಜೊತೆಗೆ ಬೇರೆಯವರ ಹೆಂಡತಿಯರ ಬಗೆಗೆ ಮಾತಾಡಿ ನನಗೆ ಅಭ್ಯಾಸವಿಲ್ಲ ಅಂತ ಬರೆದಿದ್ದರಂತೆ. ಪ್ರಾರಂಭಿಕ ವಿದ್ಯಾಭ್ಯಾಸ ಸೆಂಟ್ರಲ್ ಕಾಲೇಜಿನಿಂದ ಇಂಡರ್ ಮೀಡಿಯಟ್. ಅವರಿಗೆ ರಸಾಯನ ಶಾಸ್ತ್ರ, ಪ್ರಾಣಿ ಶಾಸ್ತ್ರ, ಸಸ್ಯ ಶಾಸ್ತ್ರಗಳಲ್ಲಿ ಹೆಚ್ಚಿನ ಅಂಕಗಳು ಬಂದಿದ್ದವು. ಆಗ ಜಿ.ಪಿ. ರಾಜರತ್ನಂ ಅವರು

ಬಾಟನಿ,ಜಿಯಾಲಜಿ,ಜೂಆಲಜಿಗಲೊಂದೆಡೆ ಸೇರ್ಗುಮೇ
ಸೇರ್ಗುಮಾ ಸ್ವರ್ಗದಲ್ಲಿ, ಕಲ್ಪಗಳ ಚಿಂತೆಗಳ
ಕಾಮಗಳ ಕಳಕೊಂಡು
ಮೇಣೆಮ್ಮ ಸೈನ್ಸು ಕಾಲೇಜುಗಳಲ್ಲಿ

ಎಂದಿದ್ದರು. ಸ್ವಾಮಿಯವರಿಗೆ ಪ್ರಾಣಿಶಾಸ್ತ್ರ ಅಧ್ಯಯನ ಮಾಡೋ ಆಸೆಯಾಯಿತು. ಆಗ ಎ.ಆರ್.ಕೃಷ್ಣ ಶಾಸ್ತ್ರಿಗಳು ಥೂ ಏನಯ್ಯ ಅದು ಪ್ರಾಣಿಗಳನ್ನು ಕುಯ್ಕೊಂಡು, ಮಾಡ್ಕೊಂಡು, ಅದರ ಬದಲಿಗೆ ಸಸ್ಯ ಶಾಸ್ತ್ರ ತಗೋ, ಹೂವು ಗಿಡ ಎಲ್ಲ ಚನ್ನಾಗಿರುತ್ತೆ. ಹಾಗೆ ಸ್ವಾಮಿಯವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿ 1939ರಲ್ಲಿ ಸಸ್ಯ ಶಾಸ್ತ್ರದಲ್ಲಿ ಬಿ.ಎಸ್.ಸಿ. ಪದವಿ ಪಡೆದರು.

ತಂದೆ ಡಿವಿಜಿ ಅವರಿಂದ ಓದಲು ಪ್ರೇರೇಪಣೆ. ಓದಿದ್ದೀನಿ ಅಂತ ಖಚಿತಪಡಿಸಿಕೊಳ್ಳಲು ಡಿವಿಜಿ ಕೆಲವು ಪ್ರೆಶ್ನೆಗಳನ್ನು ಕೇಳುತ್ತಿದ್ದರು. ಹೀಗಾಗಿ ಸ್ವಾಮಿಯವರ ಒಲವು ಸಾಹಿತ್ಯದತ್ತ ಬಂತು. ಜೊತೆಗೆ ಅಂದಿನ ಸಾಹಿತ್ಯ ದಿಗ್ಗಜರಾದ ಎ.ಆರ್.ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀ, ವಿ.ಸೀ ಮುಂತಾದವರ ಸಂಗಮ ಮನೆಯಲ್ಲಿ ಆಗುತ್ತಿತ್ತು.

1947ರಿಂದ 1951ರವರೆಗೆ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ರೀಸರ್ಚ್ ಫೆಲೋ
1953 ರಿಂದ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ
1962 ರಿಂದ ಪ್ರಿನ್ಸಿಪಾಲ್ – 1977ರಲ್ಲಿ ನಿವೃತ್ತಿ.
ನಂತರ ಮೈಸೂರು ವಿಶ್ವವಿದ್ಯಾನಿಲಯದ ಸಂದರ್ಶನ ಪ್ರಾಧ್ಯಾಪಕ.

ರಚಿಸಿದ ಗ್ರಂಥಗಳು - ಹಸಿರು ಹೊನ್ನು (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,) ಸಂತಾನ ರಹಸ್ಯ (ದೇವರಾಜ ಬಹದ್ದೂರ್ ಪ್ರಶಸ್ತಿ) ಅಮೆರಿಕಾದಲ್ಲಿ ನಾನು (ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ) ಕಾಲೇಜು ರಂಗ (ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ ಪ್ರಶಸ್ತಿ) ಕಾಲೇಜು ತರಂಗ , ಪ್ರಾಧ್ಯಾಪಕನ ಪೀಠದಲ್ಲಿ, ತಮಿಳು ತಲೆಗಳ ನಡುವೆ, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ, ದೌರ್ಗಂಧಿಕಾಪಹರಣ, ಶಾಸನಗಳಲ್ಲಿ ಗಿಡಮರಗಳು, ಸಾಕ್ಷಾತ್ಕಾರದ ಹಾದಿಯಲ್ಲಿ, ಸಾಹಿತ್ಯ ದಿಗ್ಗಜರಾದ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು, ಪ್ರೊ. ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಪ್ರೊ. ಬಿ.ಎಂ. ಶ್ರೀಕಂಠಯ್ಯನವರು, ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು, ಮತ್ತು ಪ್ರೊ. ವಿ. ಸೀತಾರಾಮಯ್ಯನವರು ಇವರುಗಳ ಕುರಿತ ಗ್ರಂಥ ಪಂಚಕಲಶಗೋಪುರ, ಸಸ್ಯಶಾಸ್ತ್ರ ಸಂಶೋಧನೆಗೆ 1976ರಲ್ಲಿ ಬೀರ್ಬಲ್ ಸಹಾನಿ ಗೋಲ್ಡ್ ಮೆಡಲ್.

ಮುಂದಿನ ಪುಟ ನೋಡಿ ...

ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕಾ ಪುಸ್ತಕದಲ್ಲಿ ನಾವು ಬಳಸುಕ ಕಾಯಿ-ಪಲ್ಯ, ಗೆಡ್ಡೆ-ಗೆಣಸು, ಹಣ್ಣು-ಹಂಪಲು ಎಲ್ಲವೂ ಅಮೆರಿಕಾ ಮೂಲದ್ದು. ಇವುಗಳು ಯಾವಾಗ ಹೇಗೆ ಭಾರತಕ್ಕೆ ಬಂದವು ಎನ್ನುವುದನ್ನು ವಿವರಿಸುವ ಪುಸ್ತಕ. ಹಾಗೆಯೇ ತಮಿಳು ತಲೆಗಳ ನಡುವೆ ಪುಸ್ತಕದಲ್ಲಿ ಅವರು ಮದರಾಸಿನಲ್ಲಿದ್ದಾಗ ತಮಿಳರ ಭಾಷೆ, ಸಾಹಿತ್ಯ, ಮುಂತಾದುವುಗಳ ಉತ್ಪ್ರೇಕ್ಷಿತ ಅಭಿಪ್ರಾಯಗಳನ್ನು ವಿರೋಧಿಸಿ ಲೇಖನಗಳನ್ನು ಬರೆದಿದ್ದರು. ಅವುಗಳ ಸಂಕಲನ. ಯಾವ ಭಾಷೆಯೇ ಆಗಲೀ ತಮ್ಮದೇ ಹೆಚ್ಚೆಂಬ ಧೋರಣೆಯನ್ನು ತಳೆಯದಿರುವುದು ಉತ್ತಮ. ಆಯಾ ಸ್ಥಾನದಲ್ಲಿ ಅವುಗಳ ಹೆಚ್ಚಳ ಎಂದೂ ಕಡಿಮೆಯಾಗುವುದಿಲ್ಲ ಎಂಬ ವಿವೇಕವನ್ನು ತಿಳಿಸುವ ಪುಸ್ತಕ ಇದು.

ಸ್ವಾಮಿಯವರ ಬರವಣಿಗೆಯ ಶೈಲಿಗೆ ಒಂದು ಉದಾಹರಣೆ – "ಸಾಕ್ಷಾತ್ಕಾರದ ಹಾದಿಯಲ್ಲಿ" ಪುಸ್ತಕದಲ್ಲಿ ಅವರು ಹೀಗೆ ಬರೆಯುತ್ತಾರೆ " ಹೊರದೇಶಗಳಿಂದ ಅಲೆ ಅಲೆಯಾಗಿ ಬಂದು, ನೆಲೆ ನೆಲೆಯಾಗಿ ನಿಂತು, ಎಲೆ ಎಲೆಯಾಗಿ ಬೆಳೆದು, ತಲೆ ತಲೆಯಾಗಿ ಕೆದರಿ, ಬಲೆ ಬಲೆಯಾಗಿ ಹರಡಿ, ನಮ್ಮಲ್ಲಿ ಅನೇಕರನ್ನು ಕೆಡವಿ ಮೇಲುಗೈಯಾಗಿರುವ ಎಲೆ-ಅಡಿಕೆ, ತಂಬಾಕು-ಅಫೀಮು-ಗಾಮಜಾ, ಕಾಫಿ-ಟೀ ಇವು ಭಾರತೀಯ ರಕ್ತನಾಳಗಳಲ್ಲಿ ಹರಿಯುತ್ತಿವೆ.

ಸಸ್ಯ ವಿಜ್ಞಾನವನ್ನು ವಿಜ್ಞಾನವನ್ನಾಗಿಯೇ ಬರೆದರೆ ಜನ ಅಷ್ಟು ಓದುತ್ತಾರೋ ಇಲ್ಲವೋ ಎಂಬ ಒಂದು ಸಂದೇಹ ಬಂದಿದ್ದರಿಂದ ಅದಕ್ಕೆ ಕೊಂಚ ಹಾಸ್ಯವನ್ನು ಒಂದು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡರೆ ಅದನ್ನು ಓದೋ ಭಾರದಲ್ಲಿ ಒಂದೆರಡು ವಿಜ್ಞಾನ ವಿಷಯಗಳು ಓದುಗರ ಮನಸ್ಸು ಹೊಕ್ಕೀತು ಅಂತ ಅಂದುಕೊಂಡು ನನ್ನ ಎಲ್ಲಾ ಪುಸ್ತಕಗಳಲ್ಲೂ ಅಲ್ಲಲ್ಲಿ ಹಾಸ್ಯರಸ ಹೊಮ್ಮುವಂತೆ ನೋಡಿಕೊಂಡಿದ್ದೇನೆ ಎಂದಿದ್ದರು. ಹಾಸ್ಯವನ್ನು ವಿಜ್ಞಾನ ಸಾಹಿತ್ಯದಲ್ಲಿ ಉಪಯೋಗಿಸಿಕೊಳ್ಳುವುದರಿಂದ ಅದನ್ನು ಓದುವ ಭರದಲ್ಲಿ ವಿಜ್ಞಾನದ ವಿಷಯಗಳೂ ಜನರ ಮನಸ್ಸಿಗೆ ಹೋಗುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದರು.

ಸ್ವಾಮಿಯವರು ಬರವಣಿಗೆ ಪ್ರಾರಂಭ ಮಾಡಿದಾಗ ಸಸ್ಯಶಾಸ್ತ್ರದ ಬಗೆಗೆ ಒಂದು ಲೇಖನ ಬರೆದು ತಂದೆಯವರಿಗೆ ತೋರಿಸಿದ್ದಾಗ ಅವರು ನೀನು ಬರವಣಿಗೆ ಬಿಟ್ಟು ಅಧ್ಯಯನದ ಕಡೆ ಗಮನ ಕೊಡು. ಮನೆಗೊಬ್ಬ ಲೇಖಕ ನಾನಿರುವುದೇ ಸಾಕು ಎಂದಿದ್ದರು. ಆದರೆ ಮುಂದೆ ಹಸುರು ಹೊನ್ನು ಪುಸ್ತಕ ಬರೆದಾಗ ಅದರ ಹಸ್ತಪ್ರತಿಯನ್ನು ತಂದೆಗೆ ತೋರಿಸಿದ್ದರು. ಡಾ. ಡಿವಿಜಿಯವರು ಹಸುರು ಹೊನ್ನು " ಹಸ್ತ ಪ್ರತಿಯನ್ನು ಓದಿಸಿ ಕೇಳಿಯಾದ ಮೇಲೆ " ಕನ್ನಡದಲ್ಲಿ ಇಂಥಾ ಪುಸ್ತಕಗಳು ಬೇಕು" ಅಂತ ಹೇಳಿದ್ದರು. ಆದರೆ ಹಸುರು ಹೊನ್ನು ಪುಸ್ತಕ ಪ್ರಕಟವಾಗುವ ವೇಳೆಗೆ ಡಿವಿಜಿಯವರು ಇರಲಿಲ್ಲ.

ಹಸಿರು ಹೊನ್ನು ಪುಸ್ತಕವನ್ನು ಸ್ವಾಮಿಯವರು ತಮ್ಮ ತಂದೆಗೇ ಅರ್ಪಣೆ ಮಾಡಿದ್ದರು. ಅರ್ಪಣೆಯ ಮಾತುಗಳು ಹೀಗಿವೆ " ನೀನು ಕನ್ನಡದಲ್ಲಿ ಬರೆಯುವುದು ಬೇಡ, ಮನೆಗೊಬ್ಬನಿದ್ದೇನಲ್ಲ ನಾನು, ಸಾಕು ಎಂದು ಬುದ್ದಿ ಮಾತು ಹೇಳುತ್ತಿದ್ದರಾದರೂ " ಹಸುರು ಹೊನ್ನು " ಹಸ್ತ ಪ್ರತಿಯನ್ನು ಓದಿಸಿ ಕೇಳಿಯಾದ ಮೇಲೆ " ಕನ್ನಡದಲ್ಲಿ ಇಂಥಾ ಪುಸ್ತಕಗಳು ಬೇಕು" ಅಂತ ಹೇಳಿ ಪುಸ್ತಕ ಅಚ್ಚಾಗುವುದರೊಳಗಾಗಿಯೇ ಕಣ್ಮುಚ್ಚಿದ ನನ್ನ ಪೂಜ್ಯ ತಂದೆಯವರ ಸ್ಮರಣೆಗೆ". ಇದು ತಂದೆ ಮಗ ಇವರುಗಳ ಧೋರಣೆಯನ್ನು ತೋರುತ್ತದೆ. ಹಸುರು ಹೊನ್ನು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಅದನ್ನು ಸ್ವಾಮಿಯವರು ತಗೊಂಡಿರಲಿಲ್ಲ. ಮೈಸೂರಿನಲ್ಲಿ ಕುವೆಂಪು ಅವರಿಗೆ ಸಾಹಿತ್ಯ ಅಕಾಡೆಮಿಯ ಗೌರವ ಸದಸ್ಯತ್ವ ಪ್ರದಾನ ಮಾಡುವ ಸಮಾರಂಭದಲ್ಲಿ ಸ್ವಾಮಿಯವರಿಗೂ ಪ್ರಶಸ್ತಿ ಕೊಡುವ ಕಾರ್ಯಕ್ರಮ ಹಾಕಿಕೊಂಡರು. ಸ್ವಾಮಿಯವರು ಇದಕ್ಕೆ ಒಪ್ಪದೇ ಕುವೆಂಪು ಅವರ ಸಮಾರಂಭದ ಜೊತೆ ಇದನ್ನು ಸೇರಿಸಿದರೆ ಕುವೆಂಪು ಗೌರವ ತೋರಿಸಿದಂತಾಗುವುದಿಲ್ಲ ಎಂದರೂ ಕಡೆಗೆ ಒಪ್ಪಬೇಕಾಯಿತು. ಅಂದಿನ ಸಮಾರಂಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಉಮಾಶಂಕರ ಜೋಶಿಯವರು ಸ್ವಾಮಿಯವರ ಬಗೆಗೆ ಮಾತಾಡುತ್ತಾ ಪ್ರಖ್ಯಾತ ತಂದೆಯ ಪ್ರಖ್ಯಾತ ಮಗ ಎಂದು ಬಣ್ಣಿಸಿದ್ದರು. ಸ್ವಾಮಿಯವರು ಮಾತಾಡುವಾಗ ನನ್ನ ತಂದೆ ಬದುಕಿದ್ದಿದ್ದರೆ ಈ ಪ್ರಶಸ್ತಿ ತಗೋಳೋಕೆ ಬಿಡುತ್ತಿರಲಿಲ್ಲ, ನೀನು ಮಾಡಿದ್ದು ಏನು ಮಹಾ ಎನ್ನುತ್ತಿದ್ದರು ಎಂದು ವಿನಯ ಪ್ರದರ್ಶಿಸಿದ್ದರು.

ಹತ್ತು ಹಲವು ಭಾಷೆ ಮತ್ತು ವಿಷಯಗಳನ್ನು ಅಧ್ಯಯನ ಮಾಡೋದರಲ್ಲಿ ಸ್ವಾಮಿಯವರಿಗೆ ಆಸಕ್ತಿ. ಅವರಿಗೆ ಜರ್ಮನ್, ಲ್ಯಾಟಿನ್, ಸ್ಪಾನಿಷ್, ಇಂಗ್ಲಿಷ್, ಕನ್ನಡ, ತಮಿಳು, ತೆಲುಗು ಭಾಷೆಗಳು ಬರುತ್ತಿತ್ತು.

ಕೆಲವರಿಗೆ ಜಾಕ್ ಆಫ್ ಆಲ್, ಮಾಸ್ಟರ್ ಆಫ್ ನನ್ ಅಂತಾರೆ. ಆದರೆ ಸ್ವಾಮಿಯವರು ಮಾಸ್ಟರ್ ಆಫ್ ಆಲೂ ಹೌದು, ಜಾಕ್ ಆಫ್ ಆಲೂ ಹೌದು. ಏಕೆಂದರೆ ಅವರಿಗೆ ಸಂಗೀತ, ಕಸೂತಿ, ಚಿತ್ರಕಲೆ, ವ್ಯಂಗ್ಯಚಿತ್ರ, ಪೈಂಟಿಂಗ್ ಇವುಗಳಲ್ಲಿ ಕೂಡಾ ವಿಶೇಷ ಆಸಕ್ತಿ ಇತ್ತು. ಕೆಲವು ಕಾಲ ಅವರು ಹಿಂದೂ ಪತ್ರಿಕೆಗೆ ಸಂಗೀತ ವಿಮರ್ಶೆ ಬರೆಯುತ್ತಿದ್ದರು.

ಬದುಕನ್ನು ಡಿವಿಜಿಯವರು ಗುಲಾಬಿ ಹೂವಿಗೆ ಹೋಲಿಸಿ ನಾವೂ ಅದರಂತಿರಬೇಕು ಎನ್ನುತ್ತಿದ್ದರು. ಆದರೆ ಸ್ವಾಮಿಯವರು ಡಿವಿಜಿಯವರು ಬರೆದ

ನೋಡಾ ಗುಲಾಬಿ ತಾನರಳಿ ಸಾರುವುದಿಂತು
ಜಗದೊಳಗೆ ನಾಂ ಬಂದು ನಗುನಗುತೆ ನಿಂತು
ಬಿಗಿದಿರದೆ ಪಟ್ಟು ಚೀಲವನಿತ್ತು ಬಿಚ್ಚುತ್ತೆ
ಮಗಮಗಿಪ ನಿಧಿಯನೆಲ್ಲವ ನೆರೆಯುತಿಹೆನು

ಮುಂದಿನ ಪುಟ ನೋಡಿ ...

ಎನ್ನುವಂತೆ ತಮ್ಮ ಪ್ರತಿಭೆ, ಸ್ನೇಹ, ಹಾಸ್ಯ, ಇವುಗಳ ಮುಖಾಂತರ ಪರಿಮಳವನ್ನು ಬೀರುತ್ತಲೇ ಹೋದರು. ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿಗೆ ಮಾರ್ಗದರ್ಶಿಯಾಗಿದ್ದರು.

ಪ್ರತಿದಿನ ನಿದ್ದೆಗೆ ಜಾರೋ ಮೊದಲು ಏನನ್ನಾದರೂ ಓದೋದು ಸ್ವಾಮಿಯವರ ಅಭ್ಯಾಸ. ಇದು ಬಹಳ ಹಿಂದಿನಿಂದ ಬಂದುದು. ಒಮ್ಮೆ ಸ್ವಾಮಿಯವರು ಉಪನಿಷತ್ತನ್ನು ಮಲಗಿಕೊಂಡು ಓದುತ್ತಿದ್ದರಂತೆ. ಅದನ್ನು ನೋಡಿದ ಡಿವಿಜಿ ಉಪನಿಷತ್ತನ್ನು ಮಲಗಿಕೊಂಡು ಓದುತ್ತಿದ್ದೀಯಾ, ಕುರ್ಚಿಯಲ್ಲಿ ಕೂತು ಟಿಪ್ಪಣಿ ಮಾಡಿಕೊಳ್ಳುತ್ತಾ ಓದಬೇಕಾದ ಪುಸ್ತಕ ಅದು ಅಂತ ಹೇಳಿದ್ದರು.

ಯಾವುದೇ ಉಪನ್ಯಾಸವಾಗಲೀ ಅದಕ್ಕೆ ಸರಿಯಾದ ತಯಾರಿ ಮಾಡಿಕೊಂಡು ಬೇಕಾದ ಪರಿಕರಗಳನ್ನು ಜುಬ್ಬದ ಜೋಬಿನಲ್ಲಿ ಹಾಕಿಕೊಂಡು ಹೋಗುತ್ತಿದ್ದರು. ಒಮ್ಮೆ ಉಪನ್ಯಾಸ ಕೊಡುವಾಗ ತುಳಸಿ ಗಿಡದ ಬಗೆಗೆ ವಿವರಣೆ ಕೊಡುತ್ತಾ ನೋಡಿ ಇದು ಶ್ರೀತುಳಸಿ, ಇದು ಕೃಷ್ಣ ತುಳಸಿ ಇದು ನಮ್ಮ ದೇಶದ್ದು ಅಲ್ಲವೇ ಅಲ್ಲ. ಇಲ್ಲಿದೆ ನೋಡಿ ನಮ್ಮ ದೇಶದ್ದು ತುಳಸಿ ಎಂದು ಒಂದು ಎಸಳು ತುಳಸಿಯನ್ನು ಕೂತಿದ್ದವರಿಗೆ ಕೊಟ್ಟು ಮೂಸಿ ನೋಡಿ ಏನು ಘಮ ಅಂದರಂತೆ. ತುಳಸಿಯನ್ನು ಮೂಸಿದ ಅವರು ಇದು ನಾಯಿ ತುಳಸಿ ಎಂದರು. ಅದಕ್ಕೆ ಸ್ವಾಮಿಯವರು ನಕ್ಕು ಹೌದು ಇದು ನಾಯಿ ತುಳಸಿ ನಿಜ ನಾವೆಲ್ಲಾ ನಮ್ಮ ದೇವರನ್ನೇ ಪೂಜಿಸಬೇಕಲ್ವಾ, ನಮ್ಮ ದೇವರು ನಮ್ಮ ಗಿಡದಲ್ಲಿ ತಾನೇ ಇರ್ತಾನೆ, ಪಾರಿಜಾತದಲ್ಲಿ ಇದ್ದ ಹಾಗೆ ಎಂದರು.

ಒಮ್ಮೆ ಒಂದು ಉಪನ್ಯಾಸಕ್ಕಾಗಿ ಬೇರೆ ಊರಿಗೆ ಹೋದರು. ಎರಡು ದಿನ ಮುಂಚಿತವಾಗಿಯೇ ಹೋಗಿ ಊರಿನಲ್ಲಿ ಚನ್ನಾಗಿ ಸುತ್ತಾಡಿದರು. ಉಪನ್ಯಾಸದ ದಿನ ಕೆಲವೇ ನಿಮಿಷಗಳು ಮಾತಾಡಿ ಈಗ ನೀವೆಲ್ಲ ನನ್ನ ಜೊತೆ ಬನ್ನಿ ನನ್ನದು ಸ್ಥಾವರ ಉಪನ್ಯಾಸವಲ್ಲ ಜಂಗಮ ಉಪನ್ಯಾಸ ಅಂದು ಎಲ್ಲರನ್ನೂ ಕರೆದುಕೊಂಡು ಊರಿನ ಅನೇಕ ಕಡೆ ತಾವು ನೋಡಿದ್ದ ಗಿಡ ಮರಗಳ ಬಗೆಗೆ ವಿವರಣೆ ಕೊಡುತ್ತಾ ಉಪನ್ಯಾಸ ಮುಗಿಸಿದರಂತೆ.

ಗೋಖಲೆ ಸಂಸ್ಥೆಗೆ ಒಂದು ಕಾರ್ಯಕ್ರಮಕ್ಕೆ ಬಂದು ಹೊರಟಾಗ ರಾತ್ರಿ ಹತ್ತು ಗಂಟೆಯಾಗಿತ್ತು. ದಾರಿಯಲ್ಲಿ ಬಂದ ರಿಕ್ಷಾ ನಿಲ್ಲಿಸಿ ಬನಶಂಕರಿಗೆ ಹೋಗಬೇಕು ಡಬ್ಬಲ್ ಛಾರ್ಜು ಕೊಡ್ತೀನಿ ಬರ್ತೀಯಾಪ್ಪ ಅಂತ ಕೇಳಿದರಂತೆ.

ಒಮ್ಮೆ ಡಿವಿಜಿಯವರು ಮಗನನ್ನು ನೋಡಲು ಕಾಲೇಜಿಗೆ ಬಂದಿದ್ದರು. ಸ್ವಾಮಿ ಎಲ್ಲಿ ಅಂತ ಕೇಳಿದರು. ಅಲ್ಲಿದ್ದವರಿಗೆಲ್ಲ ಏನಿದು ಯಾರೀ ಮುದುಕ ನಮ್ಮ ಪ್ರಿನ್ಸಿಪಾಲರನ್ನು ಹೀಗೆ ಹೆಸರಿಡಿದು ಕೂಗುತ್ತಾರೆ ಅಂತ. ಬರ್ತಾರೆ ಕೂತ್ಕೊಳಿ ಅಂದರು. ಕೊಂಚ ಹೊತ್ತಿನಲ್ಲಿ ಸ್ವಾಮಿ ಬಂದರು. ಅವರ ಮುಂದೆ ಕೈ ಕಟ್ಟಿ ನಿಂತೇ ಮಾತಾಡಿದರು. ನಯ ವಿನಯ ತೋರಿದರು. ಕಾಲೇಜಿನವರಿಗೆ ಆನಂತರ ಗೊತ್ತಾಯ್ತು ಅವರು ನಮ್ಮ ಸ್ವಾಮಿಯವರ ತಂದೆ ಡಿವಿಜಿ ಎಂದು. ಮನುಷ್ಯ ಎಷ್ಟೇ ಬೆಳೆದಿದ್ದರೂ ಹಿರಿಯರ ಮುಂದೆ ತೋರಬೇಕಾದ ವಿನಯ, ಗೌರವ ಇವುಗಳ ಬಗೆಗೆ ಸ್ವಾಮಿ ದೀರ್ಘವಾಗಿ ಮಾತಾಡಿದ್ದರು.

ಸ್ವಾಮಿಯವರ ಮದುವೆಯಾದದ್ದು ಬೆಂಗಳೂರಿನ ವಸಂತಪುರದ ದೇವಸ್ಥಾನದಲ್ಲಿ. ಸಂಬಂಧದಲ್ಲಿ ಪರಿಚಯವಿದ್ದ ಹುಡುಗಿ ವಸಂತ. ಮದುವೆಗೆ ಸೂಟು ವಾಚು ಉಂಗುರ ಅಂತೆಲ್ಲ ಮಾತಾದಾಗ ನಾನಿರುವುದು ಮದರಾಸಿನ ಉರಿ ಊರಿನಲ್ಲಿ. ಅಲ್ಲಿ ಸೂಟಿನ ಅವಶ್ಯಕತೆಯಿಲ್ಲ. ಇನ್ನು ವಾಚು ನಾನು ಕಟ್ಟೋದಿಲ್ಲ. ಬಂಗಾರದಿಂದ ದೂರವೇ ಅಂದು ಎಲ್ಲವನ್ನೂ ತಿರಸ್ಕರಿಸಿದ್ದರು. ಇನ್ನು ಆರತಕ್ಷತೆಗೂ ತುಂಬಾ ಸರಳ ಉಡುಗೆಯೇ. ಪಂಚೆ ಜುಬ್ಬದಲ್ಲಿದ್ದ ಮಗನನ್ನು ನೋಡಿ ಗುಂಡಪ್ಪನವರು ಬೇಗ ಬೇಗ ಸಿದ್ದವಾಗು ಅಂದಿದ್ದಕ್ಕೆ ಸ್ವಾಮಿಯವರು ನಾನು ಸಿದ್ದವಾಗಿದ್ದೇನೆ ಅಂದರು. ಮದುವೆ ಅಂತ ಯಾರ್ಯಾರೋ ಸೂಟು ಹಾಕಿಕೊಂಡು ಬಂದಿದ್ದರು. ಅದನ್ನು ಕಂಡ ಗುಂಡಪ್ಪನವರು ಅವರನ್ನು ನೋಡಿಯಾದರೂ ನೀನೂ ಬಟ್ಟೆ ಬದಲಾಯಿಸು ಅಂದರು. ನಂತರ ಡಿವಿಜಿಯವರು ಅವರ ಬೀಗರಿಗೆ ಚಿನ್ನದಂಥ ಅಳಿಯನನ್ನು ಪಡೆದಿದ್ದೀರಿ ನೀವೇ ಅದೃಷ್ಟವಂತರು ಅಂದಿದ್ದರು.

ಸ್ವಾಮಿ ವಸಂತ ಅವರದು ಅನ್ಯೋನ್ಯ ದಾಂಪತ್ಯ. ವಸಂತ ಅವರು ಸ್ವಾಮಿಯವರ ಬರಹಗಳನ್ನು ಪ್ರತಿ ಮಾಡುವುದು, ರುಚಿಕರ ಅಡುಗೆ ಮಾಡುವುದು, ಸ್ವಾಮಿಯವರು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಆರ್ಥಿಕ ಸಹಾಯದ ವಿತರಣೆ, ಸಭೆ, ಸಮಾರಂಭ, ಸಂಗೀತ ಕಛೇರಿಗಳಿಗೆ ಜೊತೆಜೊತೆಯಾಗಿ ಹೋಗೋದು, ಸಸ್ಯಗಳ ಸಂಶೋಧನಗೆ ಕಾಡಿಗೆ ಹೊರಟಾಗ ಜೊತೇಲಿ ಹೋಗೋದು, ಹೀಗೆ ಅವರ ನೆರಳಾಗೇ ಇದ್ದರು. ಸ್ವಾಮಿಯವರು ಹೆಂಡತಿಯನ್ನು ಬಹು ಚನ್ನಾಗಿ ನೋಡಿಕೊಳ್ಳುತ್ತಿದ್ದರು. ತಾವೇ ಅಡಿಗೆ ಮನೆಗೆ ಹೋಗಿ ಅವರಿಗೆ ಸಹಾಯ ಮಾಡೋದು, ಮನೆಗೆಲಸದಲ್ಲಿ ನೆರವಾಗೋದು ಮಾಡುತ್ತಿದ್ದರು. ಹೆಂಡತಿಗೆ ಸಕ್ಕರೆ ಕಾಯಿಲೆ ಬಂದು ದಿನಾ ಚುಚ್ಚುಮದ್ದು ತಗೋಳೋ ಸಂದರ್ಭ ಬಂದಾಗ ಸ್ವಾಮಿಯವರೇ ದಿನಾ ಅವರಿಗೆ ಚುಚ್ಚು ಮದ್ದು ಕೊಡುತ್ತಿದ್ದರು. ಸ್ವಾಮಿಯವರು ಏನೇ ಕೆಲಸ ಮಾಡುತ್ತಿದ್ದರೂ ಹೆಂಡ್ತಿದು ತಿಂಡಿ ಆದದ್ದು ತಿಳಿಯುತ್ತಿತ್ತು. ಅವರೇ ಎದ್ದು ಬಂದು ಚಚ್ಚುಮದ್ದು ಕೊಡುತ್ತಿದ್ದರು ಮತ್ತು ಚುಚ್ಚುಮದ್ದು ಕೊಡೋದನ್ನು ಎಂದೂ ಮರೆತವರೇ ಅಲ್ಲ. ಅದಕ್ಕೆ ವಸಂತ ಅವರು ಸ್ವಾಮಿಯವರನ್ನು ಕಂಡು ನನ್ನ ಮೈಯನ್ನು ತೂತು ಮಾಡೋದೇ ನಿಮ್ಮ ನಿತ್ಯ ಕಾಯಕ ಅಂತ ತಮಾಷೆ ಮಾಡುತ್ತಿದ್ದರು

ಮುಂದಿನ ಪುಟ ನೋಡಿ ...

ಸ್ವಾಮಿಯವರ ಸಂಬಳದ ವಿಂಗಡನೆಯೂ ಕ್ರಮಬದ್ಧ – ತಂದೆಗೆ ಅಷ್ಟು, ಮನೆ ಖರ್ಚಿಗೆ ಅಷ್ಟು – ವಿದ್ಯಾರ್ಥಿಗಳ ಸಹಾಯಕ್ಕೆ ಅಷ್ಟು – ಉಳಿದದ್ದು ತಮ್ಮ ಖರ್ಚಿಗೆ. ತಿಂಗಳ ಮೊದಲ ವಾರ ಬಾಡಿಗೆ ಕಾರು ಅಥವಾ ರಿಕ್ಷಾ, - ಮುಂದಿನ ವಾರ ಸೈಕಲ್ ರಿಕ್ಷಾ, - ನಂತರದ ವಾರ ಮನುಷ್ಯರೇ ಎಳೆಯುವ ಗಾಡಿ – ಕಡೇ ವಾರ ಬಸ್ಸು – ಇನ್ನು ಎಷ್ಟೋ ಸಲ ಪಾದಯಾತ್ರೆಯೇ ಗತಿ. ಸಿಗರೇಟು ಕಾಫಿಗಳಿಗೆ ತಿಂಗಳ ಕೊನೆಯಲ್ಲಿ ಸಾಲ. ಆದರೆ ಕಛೇರಿಗಾಗಲೀ ಮನೆಗಾಗಲೀ ಬರುವವರಿಗೆ ಸರಿಯಾದ ಸತ್ಕಾರ ಆಗಲೇಬೇಕು. ಇದರಿಂದಾಗಿಯೇ 25 ವರ್ಷಕ್ಕೂ ಹೆಚ್ಚು ದುಡಿದರೂ ಒಂದು ವಾಹನ ಕೊಳ್ಳಲಾಗಲಿಲ್ಲ, ಸ್ವಂತ ಮನೆ ಮಾಡಲಾಗಲಿಲ್ಲ.

ಕಡೆಯ ತನಕವೂ ಸ್ವಾಮಿಯವರು ಆರೋಗ್ಯವನ್ನು ಕಾಪಾಡಿಕೊಂಡರು. ಇದರಿಂದಾಗಿಯೇ ಸ್ವಾಮಿಯವರು ಹೃದಯಾಘಾತಕ್ಕೆ ತುತ್ತಾದಾಗ ಒಂದು ಕ್ಷಣ ವಸಂತ ಅವರಿಗೆ ಸ್ವಾಮಿಯವರನ್ನು ಹೇಗೆ ಸುಧಾರಿಸಬೇಕೆಂಬುದೇ ಗೊತ್ತಾಗಲಿಲ್ಲ. ಸ್ವಾಮಿಯವರ ಅಗಲಿಕೆಯನ್ನು ವಸಂತ ಅವರಿಗೆ ಬಹುಕಾಲ ಸಹಿಸಿಕೊಳ್ಳಲಾಗಲಿಲ್ಲ. ಸ್ವಾಮಿಯವರು ಹೋದ ಒಂದೇ ವರ್ಷಕ್ಕೆ ಅವರೂ ಹೋದರು.

ವಿಜ್ಞಾನಿಯಾಗಿರುವವರು ಸಾಹಿತಿಯಾಗಿರುವುದು ಅಸಂಭವವೇನಲ್ಲ ಆದರೆ ಅಪರೂಪ. ಸ್ವಾಮಿಯವರದು ನೇರವಾದ, ಸರಳವಾದ ಶೈಲಿ, ಬೇವಿಗೆ ಬೆಲ್ಲದ ಲೇಪದಂತೆ. ಕ್ಲಿಷ್ಟ ವಿಚಾರಗಳನ್ನು ಮನೋರಂಜಕವಾಗಿ ಹೇಳುವ ಕಲೆಗಾರ. ಯಾವ ಪುಟ ತೆಗೆದರೂ ಅಲ್ಲಿ ಒಂದಿಷ್ಟು ಹಾಸ್ಯದ ಹೊನಲು. ಎಂಥಾ ಹಾಸ್ಯವೆಂದರೆ ತಂಗಾಳಿಯಲ್ಲಿ ಕಂಪು ಸೂಸುವ ಪುಷ್ಪದಂತೆ ಆಹ್ಲಾದಕರ. ಸ್ವಾಮಿಯವರ ಎಲ್ಲ ರಚನೆಗಳನ್ನೂ ವಿಜ್ಞಾನ, ಸಾಹಿತ್ಯ ಮತ್ತು ಹಾಸ್ಯಗಳ ತ್ರಿವೇಣಿ ಸಂಗಮ ಎನ್ನಬಹುದು. ಹಸರು ಹೊನ್ನು ಕೃತಿಗೆ ರಚನೆಯಾದ ವ್ಯಂಗ್ಯಚಿತ್ರಗಳು ಸ್ವಾಮಿಯವರಿಗೆ ಮೆಚ್ಚುಗೆಯಾಗದೇ ಹೋದಾಗ ಅವರೇ ಕುಂಚ ಹಿಡಿದು ವ್ಯಂಗ್ಯಚಿತ್ರಗಳನ್ನು ಬಿಡಿಸಿದರು.

ಇಂಥಾ ಅಪ್ರತಿಮ ವ್ಯಕ್ತಿತ್ವದ ಡಾ. ಬಿ.ಜಿ.ಎಲ್.ಸ್ವಾಮಿಯವರು ನಮ್ಮನ್ನು ಅಗಲಿದ್ದು 2 ನವಂಬರ್ 1980. ಅವರು ದೈಹಿಕವಾಗಿ ನಮ್ಮೊಂದಿಗೆ ಇಲ್ಲದಿರಬಹುದು ಆದರೆ ಅವರ ಕೃತಿಗಳ ಮೂಲಕ ಸದಾ ಜೀವಂತವಾಗಿರುತ್ತಾರೆ. ▪

ಕನ್ನಡವನ್ನು ನಮಗೂ, ನಮ್ಮ ಮುಂದಿನ ತಲೆಮಾರಿಗೂ ಹೇಗೆ ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬಹುದೆಂದು ತಿಳಿಸಿ.

ಇದು ನಿಮ್ಮ ಸ್ವಂತ ಅನುಭವವಾಗಿರಬಹುದು. ಅಥವಾ ನಿಮ್ಮ ಆಲೋಚನೆಯೂ ಆಗಿರಬಹುದು.

ನೀವು ಕಥೆ ಕವನಗಳ ಮೂಲಕವೂ ತಿಳಿಸಬಹುದು.

ಚಿಲುಮೆಯ ಸಂಪಾದಕೀಯ ಸಮಿತಿಯು ಆರಿಸಲ್ಪಟ್ಟ ಬರಹಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

ನಿಮ್ಮ ಬರಹಗಳನ್ನು ಇಲ್ಲಿಗೆ ಕಳಿಸಿ **horanadachilume@gmail.com**



ಒಂದೇ ಗಗನವ ಕಾಣುತೊಂದೆ ನೆಲವನು ತುಳಿಯು |
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ||
ಒಂದೇ ಗಾಳಿಯನುಸಿರ್ವ ನರಜಾತಿಯೊಳಗೆಂತು |
ಬಂದುದೀ ವೈಷಮ್ಯ? ಮಂಕುತಿಮ್ಮ ||

ಕಾಣುತೊಂದೆ = ಕಾಣುತ+ಒಂದೆ, ತುಳಿಯುತೊಂದೆ = ತುಳಿಯುತ+ಒಂದೆ, ನೀರ್ಗುಡಿದು = ನೀರು+ಕುಡಿದು, ಗಾಳಿಯನುಸಿರ್ವ = ಗಾಳಿಯನು+ಉಸಿರ್ವ, ನರಜಾತಿಯೊಳಗೆಂತು = ನರ+ಜಾತಿಯ+ಒಳಗೆ+ಎಂತು, ಉಣ್ಣು = ತಿನ್ನು, ಉಸಿರ್ವ = ಉಸಿರಾಡುವ, ನರಜಾತಿ = ಮಾನವ ಜನಾಂಗ, ವೈಷಮ್ಯ = ದ್ವೇಷ, ಎಂತು-ಹೇಗೆ.

ಒಂದೇ ಆಕಾಶವ ಕಾಣುತ, ಒಂದೇ ನೆಲವನ್ನು ತುಳಿಯುತ ಒಂದೇ ಧಾನ್ಯವನ್ನು ಉಣ್ಣುತ ಒಂದೇ ಗಾಳಿಯನು ಉಸಿರಾಡುವ ಮಾನವಜಾತಿಯ ಒಳಗೆ ಈ ದ್ವೇಷ ಹೇಗೆ ಬಂತು ಎಂದು ತಮಗೆ ತಾವೇ ಪ್ರಶ್ನಿಸುತ್ತ ಈ ವಿಚಾರವನ್ನು ಓದುಗರ ಮುಂದಿಟ್ಟಿದ್ದಾರೆ, ಶ್ರೀ ಗುಂಡಪ್ಪನವರು.

ಈ ಜಗತ್ತಿನಲ್ಲಿರುವ ಮಾನವರಿಗಷ್ಟೇ ಏನು, ಸಕಲ ಜೀವಿ ಸಂಕುಲಕ್ಕೂ ತಲೆಯ ಮೇಲಿನ ಆಕಾಶ ಒಂದೇ. ಇರುವ ಭೂಮಿಯೂ ಒಂದೇ. ಎಲ್ಲರೂ ತಿನ್ನುವುದು ಈ ಭೂಮಿಯ ಮೇಲೆ ದೊರೆಯುವ ಆಹಾರವನ್ನೇ, ಕುಡಿಯುವ ನೀರಿಗೂ ಒಂದೇ ಮೂಲ, ಹಾಗಿದ್ದರೂ ಏಕೆ ಈ ವೈಷಮ್ಯ, ಈ ದ್ವೇಷ ಎಂಬ ಪ್ರಶ್ನೆ ಕಾಲಾನುಕಾಲಕ್ಕೆ ಎಲ್ಲ ಚಿಂತಕರ ಮನಗಳಲ್ಲೂ ಸುಳಿದು, ಉತ್ತರ ಕಂಡುಕೊಳ್ಳಲು ಪ್ರಯತ್ನ ನಡೆದಿದೆ.

ಆದರೆ ವಿಚಿತ್ರವೇನೆಂದರೆ, ಅನಾದಿ ಕಾಲದಿಂದಲೂ ಮನುಷ್ಯರ ಗುಂಪುಗಳ ನಡುವೆ, ಒಂದು ದೇಶ ಮತ್ತು ಮತ್ತೊಂದು ದೇಶದ ನಡುವೆ, ಅಣ್ಣ-ತಮ್ಮಂದಿರ ನಡುವೆ, ಎರಡು ಊರಿನ ನಡುವೆ, ಹೀಗೆ ಎರಡು ಗುಂಪುಗಳ ನಡುವೆ ಉದ್ಭವವಾಗುವ ದ್ವೇಷ, ದ್ವೇಷದಿಂದ ಆವೇಶ, ಇವೆರಡರ ಫಲವಾಗಿ ಜಗಳ, ಹೊಡೆದಾಟಕ್ಕೆ ಕಾರಣವಾಗುತ್ತದೆ. ಶ್ರೀ ಗುಂಡಪ್ಪನವರು ಉಲ್ಲೇಖಿಸಿರುವಂತೆ ಇವುಗಳ ಮೂಲ, ನೀರು ನೆಲಗಳೇ ಅಲ್ಲವೇ? ಇವುಗಳಿಗಾಗಿಯೇ ಜಗತ್ತಿನ ಎಲ್ಲ ಹೋರಾಟಗಳೂ ನಡೆದಿವೆ. ಇಂದು ನಮ್ಮ ದೇಶದ ನ್ಯಾಯಾಲಯಗಳಲ್ಲಿ ಹೂಡಲ್ಪಡುವ ಕಟ್ಟಳೆಗಳಲ್ಲಿ 90 ಪ್ರತಿಶತ ಭೂಮಿಗೆ ಸಂಬಂಧಿಸಿದುವೆ ಆಗಿರುತ್ತದೆ. "ಇಷ್ಟಿದ್ದರೆ ಮತ್ತಷ್ಟರಾಸೆ" ನಮ್ಮ ಜೀವಿಕೆಗೆ ಎಷ್ಟು ಬೇಕೋ ಅಷ್ಟನ್ನು ಪಡೆದು ಕಾಯ ಕರ್ಮ ಮಾಡಿ ಜೀವಿಸುವುದು ಸರಿಯಾದ ಕ್ರಮ. ಆದರೆ ಮಾನವನ ಆಸೆಗೆ ಗಗನವೇ ಮಿತಿ. ಹಿಂದೆ ನಾ ಕೇಳಿದ ಕಥೆಯನ್ನು ಮತ್ತೊಮ್ಮೆ ಹೇಳಬೇಕು. ಒಬ್ಬನಿಗೆ ಬಹಳ ಬಹಳ ಭೂಮಿ ಬೇಕೆನ್ನಿಸಿತಂತೆ. ಅವನ ತಪಸ್ಸಿಗೆ ಮೆಚ್ಚಿ ದೇವರು ಏನು ವರಬೇಕೆಂದಾಗ, "ನನಗೆ ಹೆಚ್ಚು ಭೂಮಿ ಬೇಕು" ಎಂದನಂತೆ. "ನೋಡು ನೀ ನಿಂತಿರುವ ಜಾಗದಿಂದ ಇಂದು ಸಂಜೆಯವರೆಗೆ ಎಷ್ಟುದೂರ ಓಡಿ, ಎಷ್ಟು ಭೂಮಿಯನ್ನು ಕ್ರಮಿಸಿ ಮತ್ತೆ ಸೂರ್ಯಾಸ್ತಮಾನದ ವೇಳೆಗೆ ನೀ ಈಗ ನಿಂತಿರುವ ಜಾಗಕ್ಕೆ ಬಂದು ಸೇರಿದರೆ, ನೀ ಎಷ್ಟು ಭೂಮಿಯನ್ನು ಉಪಕ್ರಮಿಸಿರುತ್ತೀಯೋ ಅದನ್ನೆಲ್ಲ ನಿನಗೆ ಕೊಡುತ್ತೇನೆ" ಎಂದನಂತೆ ಆ ದೇವರು. ಮಾನವರ ಬಲಹೀನತೆ ಆ ದೇವರಿಗೇ ಗೊತ್ತಿಲ್ಲವೇ. ಅದನ್ನು ಕೊಟ್ಟದ್ದೂ ಅವನೇ ತಾನೇ? ಸರಿ ಇವ ಓಡಿದ, ಓಡಿದ. ಓಡಿ ಓಡಿ ಇನ್ನೂ ಸ್ವಲ್ಪ ಮುಂದೆ ಹೋಗುವ, ಇನ್ನೂ ಸ್ವಲ್ಪ ಮುಂದೆ ಹೋಗುವ, ಎಂದು ಓಡಿ ಓಡಿ ಮಧ್ಯಾಹ್ನದ ತನಕ ಓಡಿದ. "ಅಯ್ಯೋ ಹಿಂತಿರುಗಬೇಕಲ್ಲ ಎಂದು ಯೋಚನೆ ಮಾಡಿ ಮತ್ತೆ ಸ್ವಸ್ಥಾನ ಸೇರಲು ಮೊದಲಿಟ್ಟ. ಆರಂಭದ ಹುಮ್ಮಸ್ಸು ಮತ್ತು ಶಕ್ತಿ ಕುಂದಿತ್ತು. ಬರುತ್ತಾ ಬರುತ್ತಾ ಬಹಳ ಸುಸ್ತಾಗಿ ಕುಸಿದ. ಇನ್ನೇನು ತಾ ಶುರುಮಾಡಿದ ಸ್ಥಳ "ಅಗೋ, ಅಲ್ಲಿ ಕಾಣುತ್ತಿದೆ" ಎನ್ನುವಾಗ ಆ ಸೂರ್ಯ ಮುಳುಗಿಯೇ ಬಿಟ್ಟ. ಆ ದೇವರೂ ಮಾಯವಾಗಿಬಿಟ್ಟ. ಇವನಿಗೆ ಉಳಿದಿದ್ದು ಏನು ಬರೀ ಶ್ರಮ. ಪಶ್ಚಾತ್ತಾಪ. ಹೀಗೆ ನಾವು ಮಾಡುವ ಕೆಲಸ, ವಸ್ತು, ವ್ಯಕ್ತಿ, ವಿಷಯಗಳನ್ನು ಬಯಸುವಾಗ, ನಮ್ಮ ಮಿತಿಗಳನ್ನು ಅರಿತುಕೊಂಡರೆ ಸುಖ ಇಲ್ಲದಿದ್ದರೆ? ಇಲ್ಲದಿದ್ದರೆ, ನಮಗೆ ಸಿಗಲಿಲ್ಲವೆಂದು ಕೋಪ, ನಮಗಿಂತ ಪರರಿಗೆ ಅಧಿಕವಾಗಿ ಸಿಕ್ಕಿದೆ ಎಂದು ಅಸೂಯೆ, ಸಿಕ್ಕರೆ ಮತ್ತಷ್ಟರ ಲೋಭ, ಅಧಿಕವಾಗಿ ಸಿಕ್ಕರೆ ಮದ, ಸಿಕ್ಕದ್ದು ನನ್ನಲ್ಲೇ ಇರಬೇಕೆನ್ನುವ ಮೋಹ, ಹೀಗೆ ಎಲ್ಲವೂ ಅಂಟಿಕೊಳ್ಳುತ್ತದೆ. ಜೀವನವೇ ನರಕವಾಗುತ್ತದೆ. ಒಂದೇ ಭೂಮಿ ಒಂದೇ ಆಕಾಶ. ಈ ಭೂಮ್ಯಾಕಾಶಗಳ ಸಂಬಂಧವನ್ನು ಎಲ್ಲರೂ ಒಂದೇ ರೀತಿಯಲ್ಲಿ ಹೊಂದಿರುವಾಗ ಏಕೆ ಈ ವೈಷಮ್ಯವೆಂದರೆ, ಜಾತಿ, ಮತ, ಭಾಷೆ, ಪ್ರಾಂತ, ದೇಶಗಳ ಎಲ್ಲೆಗಳನ್ನು ಹಾಕಿಕೊಂಡು ಮಾನವರು ಅದನ್ನು ದಕ್ಕಿಸಿಕೊಳ್ಳಲು, ಕಾಪಾಡಲು ಮತ್ತು ತಮ್ಮ ಆಧಿಕ್ಯವನ್ನು ಸಾರಲು, ಸ್ಥಿರಪಡಿಸಲು ಮಾಡುವ ನಿರಂತರ ಹೋರಾಟದ ಫಲವೇ ಈ ದ್ವೇಷಾಸೂಯೆಗಳ ವಿಷ ವೃತ್ತ. ತೃಪ್ತಿಗೆ ಒಂದು ಎಲ್ಲೆ ಅಥವಾ ಮಿತಿ ಹಾಕಿಕೊಂಡರೆ ಎಲ್ಲರಿಗೂ ಸುಖ, ಇಲ್ಲದಿದ್ದರೆ ಎಲ್ಲರಿಗೂ ಹಿಂಸೆ ಮತ್ತು ಈ ಬಾಳೇ ನರಕ ಸದೃಶ. ಈ ಜಗತ್ತಿನ ಮಾನವರೆಲ್ಲ ಒಂದೇ. ಈ ಭೂಮಿ, ಆಕಾಶ, ನೀರು ಎಲ್ಲವನ್ನೂ ಪರಮಾತ್ಮ ಎಲ್ಲರ ಉಪಯೋಗಕ್ಕಾಗಿ ನಿರ್ಮಿಸಿದ್ದಾನೆ. ಇದು ಯಾವುದೂ ಶಾಶ್ವತವಾಗಿ ನಮ್ಮ ಸ್ವಂತವಾಗಲು ಸಾಧ್ಯವೇ ಇಲ್ಲ. ಏಕೆಂದರೆ ಈ ಭೂಮಿಯೇ ನಮಗೆ ಸ್ವಂತ, ನಿರಂತರ ಮತ್ತು ಶಾಶ್ವತವಲ್ಲದಿದ್ದ ಮೇಲೆ, ಈ ಭೂಮಿಯ ಮೇಲಿನ ವಸ್ತುಗಳು ಹೇಗೆ ಸ್ವಂತವಾಗಲು ಸಾಧ್ಯ. ಅಂತಕನೊಬ್ಬ ಬಾಳಿನಂಚಲ್ಲಿ ಕಾದಿಲ್ಲವೇ, ಇದಕ್ಕೆಲ್ಲ ಒಂದು ಅಂತ್ಯ ಹಾಡಲು.

ಇಂತಹ ಪ್ರವೃತ್ತಿಯಿಂದ, ನಿರಂತರ ದ್ವೇಷಾಸೂಯೆಗಳ ವಿಷ ವೃತ್ತದಲ್ಲಿ ನಾವು ಬೀಳುವುದು ಬೇಡ. ಹಾಗೆ ಬಿದ್ದವರನ್ನು ಬಿಡಿಸುವ ಪ್ರಯತ್ನ ಮಾಡುವ.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಟೀಕಾಚಾರ್ಯರ ಬಣ್ಣ ದರ್ಶನ

"ಟೀಕಾಚಾರ್ಯರ ಬಣ್ಣ ದರ್ಶನ ಕಾರ್ಯಕ್ರಮಕ್ಕೆ ಸ್ವಾಗತ. ನಿಮ್ಮ ನಿಜವಾದ ಬಣ್ಣ ತಿಳಿಯಲು ಕರೆ ಮಾಡಿ" ಎಂದಳು ಲಲನೆ. ಟೀಕಾಚಾರ್ಯರ ಕುರ್ಚಿಯ ಹಿಂದಿನ ಫಲಕದಲ್ಲಿ ಟೀಕಾಚಾರ್ಯರ ಬೃಹತ್ ಬಣ್ಣ ವೇದಿಕೆ ಎಂದು ಬರೆದಿತ್ತು.

"ಮೊದಲನೆಯ ಕರೆ ಮಿಸ್ ಮಾಲಿನಿಯವರದು. ಟೀಕಾಚಾರ್ಯರಿಗೆ"

"ಆಚಾರ್ಯರೆ, ನನ್ನದು ಬಿಳಿಯ ಮೈಬಣ್ಣ"

"ಕೊಂಚ ತಡೆಯಿರಿ ಮಿಸ್ ಮಾಲಿನಿ. ಬಿಳಿಯಲ್ಲಿ ಪೋರ್ಸಲೈನ್ ಬಿಳಿ, ಹಾಲು ಬಿಳಿ, ದಂತದ ಬಿಳಿ, ಮೊಟ್ಟೆಯ ಚಿಪ್ಪಿನ ಬಿಳಿ, ಹತ್ತಿಯ ಬಿಳಿ, ಹಿಮದ ಬಿಳಿ, ಮುತ್ತಿನ ಬಿಳಿ, ಇದರಲ್ಲಿ ನಿಮ್ಮದು ಯಾವ ಬಿಳಿ?"

"ನನ್ನದು ಪಾಲಿಷ್ ಮಾಡಿಸಿದ ಅಕ್ಕಿಯ ಬಿಳಿ. ನನಗೆ ಯಾವ ಲಿಪ್‌ಸ್ಟಿಕ್ ಒಪ್ಪುತ್ತದೆ?"

"ನೀವು ವೆಜ್ಜಾ, ನಾನ್‌ವೆಜ್ಜಾ?"

"ಏನು ಸಂಬಂಧ?"

"ವೆಜ್ ಆದರೆ ಕ್ಯಾರೆಟ್ ಕೆಂಪಿನಿಂದ ಬೀಟ್ರೂಟ್ ಕೆಂಪಿನವರೆಗೆ ಶೇಡ್ಸ್ ನೀಡುತ್ತೇನೆ. ನಾನ್‌ವೆಜ್ ಆದರೆ ರಕ್ತದ ಕೆಂಪಿನಿಂದ ಡೀಪ್ ಫ್ರೈಡ್ ಕಬಾಬ್‌ವರೆಗೆ ವಿವಿಧ ಕೆಂಪುಗಳು ಇರುತ್ತವೆ"

"ನಾನು ವೆಜ್"

"ಬರ್ಕೊಳಿ. ಒಂದೊಂದು ಸಂದರ್ಭಕ್ಕೆ ಒಂದೊಂದು ಬಣ್ಣ ಹೇಳುತ್ತೇನೆ. ಐಸ್‌ಕ್ರೀಂ ಪಾರ್ಲರ್‌ಗೆ ಹೋದಾಗ ಕ್ಯಾಂಡಿ ರೆಡ್ ಬಳಸಿ. ಇದರಿಂದ ನೀವು ದಪ್ಪವಿದ್ದರೂ ಕ್ಯಾಂಡಿ ತಿನ್ನುತ್ತೀರಿ ಎಂದು ನಿಮ್ಮ ತುಟಿಯನ್ನು ಕಂಡು ಗೆಳತಿಯರು ಗುಸುಗುಸು ಆಡಿಕೊಳ್ಳುವುದನ್ನು ತಪ್ಪಿಸಬಹುದು. ಮನೆ ಕಟ್ಟಿಸುವ ಸಂದರ್ಭದಲ್ಲಾದರೆ ಪ್ಲಾಸ್ಟರಿಂಗ್ ಆಗುವುದಕ್ಕೆ ಮುನ್ನ ಬ್ರಿಕ್ ರೆಡ್ ಹಚ್ಚಿಕೊಂಡು ಹೋದರೆ ಇಟ್ಟಿಗೆಯ ಪಕ್ಕದಲ್ಲಿ ನಿಂತು ಸೆಲ್ಫೀ ತೆಗೆಸಿಕೊಳ್ಳಲು ಅನುಕೂಲ"

"ಚಿನ್ನ ಕೊಳ್ಳಲು ಹೋಗಬೇಕಾದರೆ?"

"ಕ್ಯಾರೆಟ್ ಬಣ್ಣ. 24 ಕ್ಯಾರೆಟ್ ಚಿನ್ನವನ್ನೇ ತೆಗೆದುಕೊಳ್ಳಬೇಕೆಂದು ನೆನಪಿಸಲು"

"ಅತ್ತೆಯ ಮನೆಗೆ ಹೋಗಬೇಕಾದಾಗ?"

"ನಿಮ್ಮದು ಸೀರಿಯಲ್ ಅತ್ತೆ ಸೊಸೆಯಂತಹ ಸಂಬಂಧವೆ?"

"ಅದಕ್ಕಿಂತಲೂ ಹೊಲಸು"

"ಹಾಗಾದರೆ ತುಟಿ ನೋಡಿದಾಗಲೇ ಮಾತಾಡಿದರೆ ರಕ್ತ ಚಿಮ್ಮುವಂತಹ ನುಡಿಗಳು ಬರುತ್ತದೆ ಎಂದು ಸೂಚಿಸುವ ಮಟ್ಟದ ಬ್ಲಡ್ ರೆಡ್ಡನ್ನೇ ಬಳಸಿ. ಆ ಶೇಡ್‌ಗೆ ನಾವು ಕದನಕುತೂಹಲ ಕೆಂಬಣ್ಣ ಎಂದು ಕರೆಯುತ್ತೇವೆ" ನುಡಿದರು ಟೀಕಾಚಾರ್ಯರು.

"ಆದರೆ... ರಕ್ತದ ಕೆಂಪು ನಾನ್‌ವೆಜ್‌ಗೆ ಎಂದಿರಿ. ನಾನು ವೆಜ್"

"ವ್ಯತ್ಯಾಸವಿಲ್ಲ. ಜಗಳದ ಯೋಚನೆಯೇ ನಾನ್‌ವೆಜ್"

ಮಾಲಿನಿ ಥ್ಯಾಂಕ್ಸ್ ಹೇಳಿ ಡಿಸ್‌ಕನೆಕ್ಟ್ ಮಾಡಿದಳು.

"ಮುಂದಿನ ಕರೆ ಬಾಟ್ಲಿಬಾಯ್ ಬರಮಣ್ಣನವರದು. ಕೇಳಿ ಸಾರ್ ನಿಮಗೆ ಆಗಿಬರುವ ಬಣ್ಣ ಯಾವುದೆಂದು" ಲಲನೆ ಉಲಿದಳು.

"ನನ್ನ ಹೆಸರು ಬರಮಣ್ಣ. ನನ್ನ ಹವ್ಯಾಸ ಡ್ರಿಂಕ್ಸ್ ತೆಗೆದುಕೊಳ್ಳುವುದು. ನಾನು ಯಾವ ಬಣ್ಣದ ಬಟ್ಟೆಗಳನ್ನು ಧರಿಸಬೇಕು?"

"ಮದುವೆ ಆಗಿದೆಯಾ?"

"ಆಗಿದೆ"

"ಕುಡಿದು ಮೋರಿಯಲ್ಲಿ ಬಿದ್ದರೂ ಹೆಂಡತಿಯ ಕೈಗೆ ಸಿಗಬಾರದು ಎಂದಿದ್ದರೆ ಬಾಟಲ್ ಗ್ರೀನ್ ಬಳಸಿ. ಮೋರಿಯಲ್ಲಿನ ಪಾಚಿಗೆ ಹೊಂದಿಕೊಳ್ಳುವುದರಿಂದ ತಕ್ಷಣಕ್ಕೆ ಸಿಕ್ಕಿಬೀಳುವುದಿಲ್ಲ. ಮೋರಿ ಇಲ್ಲದ ವಿಶಾಲ ಮೈದಾನದ ಜಾಗದಲ್ಲಿದ್ದರೆ ಅಲ್ಲಿನ ಮಣ್ಣಿನ ಬಣ್ಣದ ಬಟ್ಟೆಗಳನ್ನು ಧರಿಸಿ. ಸಿಟಿಯಲ್ಲಿದ್ದರೆ ಯಾವುದು ಬೇಕಾದರೂ ಧರಿಸಿ. ಆದರೆ ಟ್ರಾಫಿಕ್ ಜಾಸ್ತಿ ಇರುವ ರಸ್ತೆಯ ಪಕ್ಕದಲ್ಲಿಯೇ ಬನ್ನಿ. ನೀವು ಯಾವ ಬಣ್ಣ ಹಾಕಿಕೊಂಡಿದ್ದರೂ ಅದು ಹೊಗೆಯ ಬಣ್ಣಕ್ಕೆ ತಿರುಗಿ, ಹೊಗೆಯ ಮಧ್ಯೆ ನೀವೇ ಹೊಗೆ ಹಾಕಿಸಿಕೊಂಡರೂ ಜನಕ್ಕೆ ತಿಳಿಯುವುದಿಲ್ಲ" ಅಷ್ಟರಲ್ಲಿ ಫೋನ್ ಡಿಸ್‌ಕನೆಕ್ಟ್ ಆಯಿತು.

"ಟೀಕಾಚಾರ್ಯರೆ, ಈ ಹೋಳಿ ಹಬ್ಬದ ಸಂದರ್ಭದಲ್ಲಿ ನಿಮ್ಮ ಬಣ್ಣದ ವಿಶೇಷತೆ ಏನೆಂದು ಹೇಳುವಿರಿ?" ಲಲನೆ ಕೇಳಿದಳು.

"ಮಹಿಳೆಯ ದಿನಾಚರಣೆಯೇ ನಿಜವಾದ ಹೋಳಿ ಹಬ್ಬ ಕಣಮ್ಮ" ಎಂದರು ಟೀಕಾಚಾರ್ಯರು.

"ಎಲ್ಲ ಬಣ್ಣಗಳೂ ಇರತ್ತಾ? ಕಪ್ಪು?"

ಮುಂದಿನ ಪುಟ ನೋಡಿ ...

“ಬಿಳಿಯದು ಹರಡಿದ ತಲೆಗೆ ಕಪ್ಪೇ ಭೂಷಣ; ಹೊಳೆಯುವ ಕಪ್ಪನೆ ತಲೆಗೆ ಬಣ್ಣ ಕಾರಣ; ವದನದ ಅಂದಕ್ಕೆ ಎಂದೂ ಕಪ್ಪೇ ಕಾರಣ” ಎಂದು “ಚೆಲುವೆಯ ಅಂದದ ಮೊಗಕೆ” ರಾಗದಲ್ಲಿ ಹಾಡಿದರು ಟೀಕಾಚಾರ್ಯರು.

“ನಾನೂ ಅದರ ಬಗ್ಗೆ ಒಂದು ಹಾಡು ಕೇಳಿದ್ದೆ ಸಾರ್.

ಹಚ್ಚೇವು ಕೂದಲಿಗೆ ಕಪ್ಪ। ಗೋದ್ರೆಜ್ಜು ಕಪ್ಪ। ಲೋರಿಯಲ್ಲು ಕಪ್ಪ।
ಬಿಳಿಯನ್ನು ಮುಚ್ಚುವಾ ಕಪ್ಪ। ಹಚ್ಚೇವು ಕೂದಲಿಗೆ ಕಪ್ಪ।
ಬಲು ದಿನಗಳಿಂದ ಕಳೆಗುಂದಿ ನಿಂತ ಕೂದಲಿಗೆ ಬಣ್ಣ ಹಚ್ಚೇವು
ಎಲ್ಲೆಲ್ಲಿ ಬಿಳಿಬಿಳಿಯ ಕೇಶ ತೋರ್ವುದೋ ಅಲ್ಲಲ್ಲಿ ಬ್ರಶ್ಶು ಮಾಡೇವು
ಬಳಿದೇವು ಕುರುಳಾ ಹೊಸೆದೇವು ಹೆರಳ ಫಳಫಳನೆ ಹೊಳೆಸಿ ಕಡೆತನಕ
ಎಳೆಎಳೆಗಳಲ್ಲಿ ಸರಿ ಬಣ್ಣ ತರಲು ಹಚ್ಚೇವು ಕೂದಲಿಗೆ ಕಪ್ಪ ॥

“ನಿಜ. ಕರ್ಕಿಯ ಹಾಡಿಗೆ ಬರೆದ ಈ ಅಣಕವಾಡನ್ನು ಮೈತ್ರೀಯಿ ಎಂಬ ಹುಡುಗಿ ಹಾಡುತ್ತಿದ್ದಳು. ಈಗ ಅವಳು ವ್ಯಾನಿಶಿಂಗ್ ಕ್ರೀಂ ಹಚ್ಚಿಕೊಂಡಳೇನೋ... ಎಲ್ಲಿಯೂ ಕಾಣುತ್ತಿಲ್ಲ. ಇರಲಿ. ತಲೆಯಿಂದ ಕಣ್ಣಿಗೆ ಬರೋಣ”

“ನಾನೇ ಹೇಳುತ್ತೇನೆ. ರೆಪ್ಪೆಯ ಅಂದಕ್ಕಾಗಿ ಹಚ್ಚಿರಿ ಕಪ್ಪಟ ಕಪ್ಪು ಕಾಡಿಗೆ. ಸರೀನಾ ಸಾರ್?”

“ಔಟ್‌ಡೇಟೆಡ್ ಗರ್ಲ್. ಮೊದಲೆಲ್ಲ ದುಂಬಿಗಣ್ಣು, ಜೇನುಗಣ್ಣು, ಸಮುದ್ರದ ಆಳದ ನೀಲಿಕಣ್ಣು ಎಲ್ಲವೂ ಇರುತ್ತಿದ್ದವು”

“ಈಗ?”

“ಈಗ ಆಲ್ ಇನ್ ಒನ್! ನಿಮ್ಮ ಬಟ್ಟೆಯ ಬಣ್ಣಕ್ಕೆ ತಕ್ಕಂತಹ ಕಂಟಾಕ್ಟ್ ಲೆನ್ಸ್ ಧರಿಸಿ! ಬೆಳಗ್ಗಿನ ದುಂಬಿಗಣ್ಣೇ ಮಧ್ಯಾಹ್ನಕ್ಕೆ ಜೇನುಗಣ್ಣು, ಸಂಜೆಗೆ ನೀಲಿಗಣ್ಣು, ರಾತ್ರಿಗೆ ತೇಲುಗಣ್ಣು ಆದೀತು. ಆದರೆ ಯಾವುದೇ ಬಣ್ಣದ ಕಂಟಾಕ್ಟ್ ಲೆನ್ಸ್ ಧರಿಸಿದರೂ, ಸಾಮಾನ್ಯವಾಗಿ ಸ್ಕ್ರೀಯರಲ್ಲಿ ಕಂಡುಬರುವುದು ಒಂದೇ ಬಣ್ಣದ ಕಣ್ಣು”

“ಯಾವುದು?”

“ಅವಳಿಗಿರುವುದು ತನಗಿಲ್ಲವಲ್ಲಾ ಎಂಬ ಕಾಮಾಲೆ ಕಣ್ಣು”

ಅಷ್ಟರಲ್ಲಿ ಮತ್ತೊಂದು ಕರೆ ಬಂದಿತು.

“ಕಾರ್ಪೊರೇಟ್ ಶ್ವೇತ ಮಾತನಾಡ್ತಿದೀನಿ. ರಾಜಕೀಯದಲ್ಲಿ ಇರುವವರಿಗೆ ಸೂಕ್ತವಾದ ಬಣ್ಣ ಯಾವುದು ಸಾರ್?”

“ಕಪ್ಪೇ ಕಣಮ್ಮ. ನಿಮ್ಮ ಹಣ ಕಪ್ಪು, ನಿಮ್ಮ ನಡೆ ಕಪ್ಪು, ನಿಮ್ಮ ಆಲೋಚನೆ ಕಪ್ಪು, ನಿಮ್ಮ ಆಚಾರ ಕಪ್ಪು.”

“ಆದರೆ ಕಪ್ಪು ನನಗೆ ಮ್ಯಾಚ್ ಆಗುವುದಿಲ್ಲ ಸಾರ್”

“ಶನಿಯ ಸಂಕೇತ ಕಪ್ಪು. ಸಾಮಾನ್ಯವಾಗಿ ಎಲ್ಲ ರಾಜಕಾರಣಿಗಳಿಗೆ ಇದು ಹೊಂದುತ್ತದೆ”

“ನನ್ನ ಮೈಬಣ್ಣವೂ ಕಪ್ಪು. ಕಪ್ಪು ಧರಿಸಿದರೆ ಫೋಟೋದಲ್ಲಿ ಬರೀ ನೆರಳು ಕಂಡಂತಾಗುತ್ತದೆ ಸಾರ್”

“ಓಹ್! ಸರಿ. ಕಾಂಟ್ರಾಸ್ಟ್ ಕಲರ್ ಧರಿಸಿ. ಬಿಳಿ ಸರಿಹೊಂದುತ್ತದೆ. ಅದಕ್ಕೇ ಎಲ್ಲ ರಾಜಕಾರಣಿಗಳೂ ಬಿಳಿಯ ವಸ್ತ್ರ ಧರಿಸುವುದು.”

“ಪರ್ಲ್ ವೈಟ್ ಇರಲೀನೋ, ಆಫ್ ವೈಟ್ ಇರಲೀನೋ ಸಾರ್?”

“ಪರ್ಲ್ ವೈಟ್ ಹಾಕಿಕೊಂಡರೆ ಬಟ್ಟೆಯಲ್ಲೇ ಪರ್ಲ್ ಇರುವಾಗ ಬೀರುವಿನಲ್ಲೂ ಪರ್ಲ್ ಇದ್ದೀತೆಂಬ ಗುಮಾನಿ ಬಂದು ರೈಡ್ ಆಗುವ ಸಾಧ್ಯತೆ ಇದೆ. ಆಫ್ ವೈಟೇ ಧರಿಸಿ”

ಫೋನ್ ಡಿಸ್‌ಕನೆಕ್ಟ್ ಆಯಿತು.

“ಸರ್, ವೈದ್ಯರಿಗೆ ಯಾವ ಬಣ್ಣ ಸೂಕ್ತ?”

“ವೈದ್ಯರು, ವಕೀಲರಿಗೆ ವೃತ್ತಿಯೇ ಸೂಚಿಸಿದೆಯಲ್ಲಾ.... ಕೇಸ್ ಗೆದ್ದುಕೊಂಡರೆ ಶಾಂತಿಯ ಸೂಚಕವಾಗಿ ಇವರ ಬಿಳಿ, ಅನ್ಯಾಯದ ವಿರುದ್ಧದ ಹೋರಾಟಕ್ಕೆ ಸಂಕೇತವಾಗಿ ಅವರ ಕಪ್ಪು ಸರಿಹೊಂದುತ್ತದೆ”

“ಕೇಸ್ ಉಲ್ಟಾ ಆದರೆ?”

“ವೈದ್ಯರ ಕೇಸ್ ಉಲ್ಟಾ ಆದರೆ ಕಡೆಯಲ್ಲಿ ಹೊದ್ದಿಸುವ ಬಟ್ಟೆ ಬಿಳಿಯೇ; ವಕೀಲರ ಕೇಸ್ ಉಲ್ಟಾ ಆದರೆ ನೇಣಿಗೆ ಮುನ್ನ ತಲೆಗೆ ಹೊದೆಸುವ ಬಟ್ಟೆ ಕಪ್ಪೇ. ಆಗಲೂ ಹೊಂದಾಣಿಕೆ ಆಗುತ್ತದೆ”

ಠಣ್ಣನೆ ದೃಶ್ಯ ಬದಲಾಯಿತು. “ಬಣ್ಣ ಹೋಯಿತೇ? ನಿಮ್ಮ ನಿಜವಾದ ಬಣ್ಣ ಬದಲಾಗುತ್ತಿದೆಯೆ? ಬಳಸಿರಿ ನೋ ರೈಡ್ ಸಾಬೂನುಗಳನ್ನು” ಎನ್ನುತ್ತಾ ಜಾಹೀರಾತು ಮೂಡಿಬಂದಿತು.

ಬ್ರೇಕ್‌ನ ನಂತರ ಸಂದರ್ಶನ ಮುಂದುವರಿಯುತ್ತದೆ. ಪ್ಲೀಸ್ ಡೋಂಟ್ ಗೋ ಅವೇ..... ▪



ನ್ಯಾಯ-ನಾಣ್ಯ

ಕನಕಾಪುರ ನಾರಾಯಣ

ಅಕ್ಬರನ ಆಸ್ತಾನದಲ್ಲಿ ಬೀರಬಲ್ ಬಹಳ ಚತುರ ಎನಿಸಿದ್ದ.ಇದನ್ನು ಕಂಡಿದ್ದ ಇತರರು ಆತನಿಗೆ ಏನಾದರೂ ಮಾಡಿ ಮೂರ್ಖನ ಪಟ್ಟ ಕಟ್ಟಲು ನಿರ್ಧರಿಸಿದರು.ಒಮ್ಮೆ ಬೀರಬಲ್ ಸಭೆಗೆ ಬಂದಾಗ ರಾಜ ಅಕ್ಬರ್ ಎಲ್ಲರ ಸಲಹೆಯಂತೆ "ಬೀರಬಲ್ ನಿನಗೆ ನ್ಯಾಯ ಬೇಕೋ ಅಥವಾ ಚೆನ್ನದ ನಾಣ್ಯ ಬೇಕೋ"ಎಂದ.ಬೀರಬಲ್ "ನನಗೆ ನಾಣ್ಯ ಬೇಕು" ಎಂದ.ಅದಕ್ಕೆ ಎಲ್ಲರೂ ತಾವು ಹೂಡಿದ್ದ ಸಂಚು ಸಾರ್ಥಕವಾಯಿತು ಎಂದು ಸಂತೋಷದಿಂದ ನಕ್ಕರು.ಅಕ್ಬರ್ ಹೇಳಿದ "ಬೀರಬಲ್ ನಾನೇನೋ ನೀನು ಹಣದಾಸೆ ಪಡುವವನಲ್ಲ ಎಂದು ಕೊಂಡಿದ್ದೆ,ಆದರೆ ನೀನು ನನಗೆ ನಿರಾಸೆ ಮಾಡಿದೆ.ಎಲ್ಲರೂ ನೆನೆಸಿದಂತೆಯೇ ನೀನು ನಡೆದೆ".ಅದಕ್ಕೆ ಬೀರಬಲ್ "ಸ್ವಾಮಿ ಯಾರಲ್ಲಿ ಏನಿಲ್ಲವೋ ಅದನ್ನೇ ಬಯಸುತ್ತಾರೆ,ನನಗೆ ನಿಮ್ಮ ರಾಜ್ಯದಲ್ಲಿ ನ್ಯಾಯ ಸಿಕ್ಕಿದ್ದೆ,ಹಣದ ಅಭಾವ ಇರುವುದರಿಂದ ನಾಣ್ಯ ಕೇಳಿದೆ"ಎಂದು ಉತ್ತರಿಸಿದ.ಅಕ್ಬರನಿಗೆ ವಿನಾಕಾರಣ ಬೀರಬಲ್ಲನನ್ನು ಪರೀಕ್ಷಿಸಿದ್ದಕ್ಕಾಗಿ ನಾಚಿಕೆಯಾಯಿತು. ▪

ಚೆಲುಮೆಯ ಎಲ್ಲಾ ಸಂಚಿಕೆಗಳೂ ಸೇರಿದಂತೆ ಕಥೆ, ಕವನ, ಹಾಸ್ಯ, ಆರೋಗ್ಯ ... ಇನ್ನಿತರ ಸಾಹಿತ್ಯಕ್ಕೆ ಭೇಟಿಕೊಡಿ
HTTP://WWW.SUGAMAKANNADA.COM/

ಖರ್ಜೂರದ ರಾಯತ

ಬೇಕಾಗುವ ಸಾಮಗ್ರಿಗಳು

- ಒಂದು ಲೋಟ ಮೊಸರು
- ನೂರು ಗ್ರಾಂ ಖರ್ಜೂರ
- ಒಂದು ಹೋಳು ತೆಂಗಿನತುರಿ
- ಕರಿಮೆಣಸು ನಾಲ್ಕು
- ಉಪ್ಪು ರುಚಿಗೆ

ಮಾಡುವ ವಿಧಾನ

- ಖರ್ಜೂರವನ್ನು ಬೀಜ ತೆಗೆದು, ಮೆಣಸು ಮತ್ತು ತೆಂಗಿನ ಕಾಯಿ ತುರಿಯೊಂದಿಗೆ ಸೇರಿಸಿ ರುಬ್ಬಿಕೊಳ್ಳಿ
- ಅದಕ್ಕೆ ಉಪ್ಪು ಸೇರಿಸಿ ಮೊಸರಿಗೆ ಬೆರೆಸಿ
- ಪುಟ್ಟ ಬಾಣಲೆಯಲ್ಲಿ ತುಪ್ಪದ ಒಗ್ಗರಣೆ ಮಾಡಿ ಮಿಶ್ರಣಕ್ಕೆ ಬೆರೆಸಿ, ಉಣಬಡಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಒಂದು ಸುಣ್ಣದ ಗೋಡೆಗೆ , ಒಂದೂ ಬಾಗಿಲಿಲ್ಲ

೨. ಹಿಡಿ ಹಿಡಿದರೆ ಹಿಡಿ ತುಂಬಾ ! ಬಿಟ್ಟರೆ ಮನೆ ತುಂಬಾ

ಉತ್ತರಕ್ಕೆ ಪುಟ ೧೭ ನೋಡಿ

ಗೆ ...

ಕರೆದು ತಾರೆ ಸರಸಿ ಸಖಿಯೆ
ಕೊಳಲನೂದುವ ಜಾಣನ
ನೋಡಿ ಒಲಿಯುವೆ ನೋಡಿ ನಲಿಯುವೆ
ಅವನ ಚೆಲುವಿನ ಆನನ

ಕರೆದು ತಾರೆ ಸರಸಿ ಸಖಿಯೆ
ಮನವ ಕದ್ದಿಹ ಚೋರನ
ಸದ್ದು ಮಾಡದೆ ಹೊದ್ದು ಮಲಗುವೆ
ಮದನ ಮೋರೆಯ ಪೋರನ

ಕರೆದು ತಾರೆ ಸರಸಿ ಸಖಿಯೆ
ಹರಿಯ ಹೆಸರಿನ ಚೆನ್ನನ
ಅವನ ಮೈಯಿಗೆ ದವನ ಸುರಿಯುವೆ
ಕೈಗೆ ಪೂಸುವೆ ಚೆಂದನ

ಕರೆದು ತಾರೆ ಸರಸಿ ಸಖಿಯೆ
ನನ್ನ ಬಾಳಿನ ಚಂದ್ರನ
ಬಳ್ಳಿಯಂದದಿ ಬಳಸಿ ತಬ್ಬುವೆ
ಗಿರಿಯನೆತ್ತಿಹ ಕಂದನ

ಕರೆದು ತಾರೆ ಸರಸಿ ಸಖಿಯೆ
ಕೊಳಲು ನುಡಿಸಲಿ ಮೋಹನ
ಮುಡಿವ ಮೊಲ್ಲೆಯನಡಿಯಲಿಡುವೆನು
ಹೃದಯವಾಗಲಿ ಪಾವನ

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಜನಿಸುವ ಮೊದಲು ಶಿಶುವಿಗೆ ನವಮಾಸಗಳು ಆಶ್ರಯ ನೀಡುವ ತಾಣ.

೨.ಆಕಳನ್ನೊಳಗೊಂಡ ಮುಖ.

೩.ದೀರ್ಘಕಾಲ ಮಳೆ ಇಲ್ಲದಾಗ ಬೇಡವೆಂದರೂ ಬರುವುದು?

೪.ಈ ಬೇಗೆಗೆ ಕಾರಣ ಬಿಸಿಲಿನ ತಾಪವಲ್ಲ, ದುಃ.

೫. ಮೋಡದ ನಾಡಿನ ಬಾಗಿಲಿಗೆ ಕಾಮನಬಿಲ್ಲು ಕಟ್ಟಿದ್ದೇನು?

೬.ಮೊದಲ ಬಾರಿಗೆ ನೋಡಿದವನಿಗೆ ಗರ ಬಡಿಸಿದ ಅಗಾಧವಾದ ಜಲರಾಶಿ.

ಮಾಡಬೇಕಾದ ಪದ:-

'ಆ ಸಮಯಕ್ಕೆ ತಕ್ಕಂತೆ' ಎಂಬುದನ್ನು ಒಂದೇ ಪದದಲ್ಲಿ ಹೀಗೂ ಹೇಳಬಹುದು.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಅಕ್ಟೋಬರ್ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಆಗಸ್ಟ್ ಪದ ಪುಂಜ - ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಹರಿಣಿ ರಾವ್, ನವದೆಹಲಿ

೧. ಈ 'ನನ್ನ' ಊರಿಗೆ ಸೂರಿಲ್ಲದಿದ್ದರೂ ಸುಂದರವಾಗಿದೆ

ಮೈ	ಸೂ	ರು

೨. ಸೂರ್ಯನನ್ನು ತಂದೆಯೆಂದು ಸಂಬೋಧಿಸಿದರೆ

ಸೂ	ರ	ಪ್ಪ

೩. ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ?

ರಾ	ಜ

೪. ಕರ್ನಾಟಕವು ಯಾವ ಗುಡಿ

ಗಂ	ಧ	ದ	ಗು	ಡಿ

೫. ಜಾತಿ ಭೇದದ ಸೋಂಕು ಕಾಣದ ಈ

ಕುಲವು ಹೆಚ್ಚಿದಷ್ಟೂ ಸಮಾಜಕ್ಕೆ ಗೌರವವು

ಗು	ರು	ಕು	ಲ

೬. ಕಸವನ್ನು ಎಸೆಯದಿದ್ದರೆ ತೆಗೆಯಬಹುದಾದದ್ದು?

ರ	ಸ

ಮಾಡಬೇಕಾದ ಪದ ಗುಚ್ಛ:-

ಚಂದದ ಊರಿನೊಡನಿರುವ ದೀರ್ಘವಾದ ಸರವಲ್ಲ, ಇದೊಂದು ಉತ್ಸವ

ಮೈ	ಸೂ	ರು	ದ	ಸ	ರಾ

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

☺ http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಜಾಣ ಕರ್ನಾಟಕ

೧. ರೈಟ್ ಸಹೋದರರು ವಿಮಾನ ಕಂಡು ಹಿಡಿದ ಕೇವಲ ೮ ವರ್ಷಗಳ ನಂತರ ವಿಮಾನವನ್ನು ವಿನ್ಯಾಸಗೊಳಿಸಿದ್ದಷ್ಟೇ ಅಲ್ಲದೆ ಯಶಸ್ವಿಯಾಗಿ ಹಾರಿಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ವ್ಯಕ್ತಿ ಯಾರು? ಇವರು ವಿನ್ಯಾಸಗೊಳಿಸಿದ ವಿಮಾನ ಯಾವುದು?

೨. ಹಿಂದೂಸ್ತಾನ್ ಏರ್ಕ್ರಾಫ್ಟ್ (ನಂತರ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್) ಕೈಗಾರಿಕೆಯನ್ನು ಸ್ಥಾಪಿಸಿದ ಪ್ರಮುಖ ಕೈಗಾರಿಕೋದ್ಯಮಿ ಯಾರು? ಇದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸಹಾಯ ನೀಡಿ ಉತ್ತೇಜಿಸಿದವರು ಯಾರು?

ಸರಿ ಉತ್ತರಕ್ಕೆ ಪುಟ ೧೮ ನೋಡಿ

ಒಗಟು - ಉತ್ತರ

೧. ಮೊಟ್ಟೆ ೨. ದೀಪ

ಹಾಸ್ಯ ಚಿಲುಮೆ

ತಿಮ್ಮನ ಹೆಂಡತಿ: ನಿನ್ನಗಂಡ ದಿನಾ ಕುಡ್ಕೊಂಡು ಬರ್ತಾನಲ್ಲಾ ನೀನು ಕೇಳಲ್ವಾ?

ಗುಂಡನ ಹೆಂಡತಿ: ಕೇಳ್ದೆ.....ಕೊಡಲ್ಲಾ ಅಂದ್ರು

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ನೀವು ಮಾಡಿ

ಛಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ

ಸಂಕಲನ: ಬದರಿ ತ್ಯಾಮಗೊಂಡ್ಲು

ಕೊರೆಯುವ ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ ಎಂದು ತಿಳಿದುಕೊಳ್ಳಲು ಈ ಪ್ರಯೋಗ ಮಾಡೋಣ.

ಬೇಕಾಗುವ ಸಾಮಗ್ರಿ:

4 ಲೋಟದಲ್ಲಿ (ಗಾಜು) ಸುಮಾರು 37 ಡಿಗ್ರಿ ಉಷ್ಣಾಂಶವಿರುವ ನೀರು (ಆರೋಗ್ಯವಂತ ಮನುಷ್ಯನ ತಾಪಮಾನ ಸುಮಾರು 37 ಡಿಗ್ರಿ)

4 ತರಹದ ಬಟ್ಟೆ ತುಂಡುಗಳು (ಉಣ್ಣೆ (wool), ಹತ್ತಿ, ನೈಲಾನ್, ಜಾಳಾದ ಬಟ್ಟೆ - ಬಟ್ಟೆಯ ತುಂಡು ಲೋಟ ಸುತ್ತುವಷ್ಟಿರಬೇಕು)

ಒಂದು ಥರ್ಮಾಮೀಟರ್

ವಿಧಾನ:

ಉಷ್ಣ ನೀರಿರುವ ಪ್ರತಿಯೊಂದು ಲೋಟಕ್ಕೂ ಒಂದೊಂದು ತರಹದ ಬಟ್ಟೆ ತುಂಡುಗಳನ್ನು ಸುತ್ತಿರಿ

ಸುಮಾರು 15-20 ನಿಮಿಷ ಸುಮ್ಮನೆ ಇರಲು ಬಿಡಿ

ನಂತರ ಪ್ರತಿಯೊಂದರ ಲೋಟದಲ್ಲಿ ಥರ್ಮಾಮೀಟರ್ ಇರಿಸುತ್ತ ತಾಪಮಾನ ಎಷ್ಟಿದೆಯೆಂದು ನೋಡಿ

ಏನಾಗುತ್ತದೆ:

ಉಣ್ಣೆಯಿಂದ ಆವೃತವಾದ ಲೋಟದ ನೀರಿನ ತಾಪಮಾನ ಮಿಕ್ಕೆಲ್ಲವುದಕ್ಕಿಂತ ಹೆಚ್ಚಿರುತ್ತದೆ. ಏಕೆಂದರೆ ಉಣ್ಣೆಯ ಎಳೆಗಳು ಹೆಚ್ಚು ಒತ್ತೊತ್ತಾಗಿ ಹೆಣೆಯಲ್ಪಟ್ಟಿರುತ್ತದೆ. ಉಷ್ಣತೆಯು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಜಾಗವೇ ಇರುವುದಿಲ್ಲ. ಹೀಗಾಗಿ ಲೋಟದ ನೀರಿನಲ್ಲಿನ ಉಷ್ಣತೆಯನ್ನು ಹಾಗೆ ಹಿಡಿದಿಟ್ಟುಕೊಂಡಿರಲು ಸಾಧ್ಯವಾಗುತ್ತದೆ.

ಇದೇ ನಿಯಮದಡಿ, ನಾವುಗಳು ಉಣ್ಣೆಯಿಂದ (wool) ಮಾಡಿದ ಬಟ್ಟೆಗಳನ್ನು ಹಾಕಿಕೊಂಡಾಗ, ಅದು ನಮ್ಮ ದೇಹದ ಉಷ್ಣತೆಯು ಆಚೆ ಹೋಗದಂತೆ ತಪ್ಪಿಸುವುದರಿಂದ ದೇಹದ ಶಾಖವು ಕಡಿಮೆ ಆಗುವುದು ತಪ್ಪುತ್ತದೆ. ಹೀಗಾಗಿ ಚಳಿಗಾಲದಲ್ಲಿ ಉಣ್ಣೆಯಿಂದ ಮಾಡಿದ ಬಟ್ಟೆ ಅಥವಾ ಸುಲಭವಾಗಿ ಉಷ್ಣತೆಯು ಹರಿದುಹೋಗದಂತಹ ಬಟ್ಟೆಗಳನ್ನು ಧರಿಸಿದರೆ, ಚಳಿಯಿಂದ ಸಂರಕ್ಷಿಸಿಕೊಳ್ಳಬಹುದು. ಇಂತಹ ಬಟ್ಟೆಗಳಿಲ್ಲದಿದ್ದರೂ, ಸುಮಾರಾಗಿ ಉಷ್ಣಾಂಶ ಹಿಡಿದಿಟ್ಟುಕೊಳ್ಳುವ ಬಟ್ಟೆಗಳನ್ನು ಎರಡು ಮೂರು ಪದರ ಕೂಡ ಧರಿಸಬಹುದು.

ಜಾಣ ಕರ್ನಾಟಕ – ಉತ್ತರ

೧. ಮೈಸೂರಿನ ಶ್ರೀ ರಾಮ್ ವೆಂಕಟಸುಬ್ಬ ಸೆಟ್ಟಿ. ಮೈಸೂರಿನ ವ್ಯಾಪಾರಸ್ಥರ ಕುಟುಂಬಕ್ಕೆ ಸೇರಿದ ಇವರು, ಲಂಡನ್ನಿನ ಆವ್ರೋ ವಿಮಾನ ಕಂಪನಿಗೆ ಸೇರಿ, ಯಶಸ್ವೀ ತಂತ್ರಜ್ಞರೆಂದು ಹೆಸರು ಪಡೆದಿದ್ದರು. ವಿಫಲಗೊಂಡಿದ್ದ ಆವ್ರೋ ವಿಮಾನದ ಮಾದರಿಯೊಂದನ್ನು ಮರು ವಿನ್ಯಾಸಗೊಳಿಸಿ ಯಶಸ್ವಿಯಾಗಿ ಹಾರಿಸಿದ್ದರು.

೨. ಹಿಂದೂಸ್ತಾನ್ ಏರ್ಕ್ರಾಫ್ಟ್ ಕಾರ್ಖಾನೆಯನ್ನು ಆರಂಭಿಸಿದವರು ಶ್ರೀ ವಾಲ್ಚಂದ್ ಹೀರಾಚಂದ್ ರವರು. ಅದಕ್ಕೆ ಧನ ಹಾಗೂ ಸ್ಥಳದ ಸಹಾಯ ನೀಡಿ ಪ್ರೇರೇಪಿಸಿದವರು ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಹಾಗೂ ದಿವಾನ್ ಮಿರ್ಜಾ ಇಸ್ಮಾಯಿಲ್ ರವರು. (ಮೈಸೂರು ಸಂಸ್ಥಾನದ ಸಹಭಾಗಿತ್ವದಲ್ಲಿ).

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಕನ್ನಡ ರಾಜ್ಯೋತ್ಸವ ಮತ್ತು ಕ್ಯಾರೆಯೋಕೆ

೨೬/೧೧/೨೦೧೭

ಭಾಗವಹಿಸಲು ಆಸಕ್ತಿ ಇರುವವರು

SUGAMAKANNADA@GMAIL.COM

ಗೆ ಇಮೇಲ್ ಮಾಡಿ

ಹಿಂದೂ ಸಂಗಮ

೧೨/೧೧/೨೦೧೭

ಮಧ್ಯಾಹ್ನ ೨- ಸಂಜೆ ೫:೩೦

ಹೆಚ್ಚಿನ ಮಾಹಿತಿಗೆ

www.hssaus.org

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.